ಶ್ರೀ ವಾಟಾಳ್ ನಾಗರಾಜ್ : ತಾವು ಪ್ರಾಮಾಣಿಕರು ಬಿಡಿ. ಅದರಲ್ಲಿ ಏನು ಅನುಮಾನ ಇಲ್ಲ.

ಅಧ್ಯಕ್ಷರು : ಶ್ರೀ ಜಿ. ರಾಜೂಗೌಡರು ಈಗ ಮಾತನಾಡಬಹುದು.

ಶ್ರೀ ಜಿ. ರಾಜೂಗೌಡರು : ಮಾನ್ಯ ಅಧ್ಯಕ್ಷರೇ, ...

ಅಧ್ಯಕ್ಷರು : ಒಂದು ನಿಮಿಷ, ಮಾನ್ಯ ಸಚಿವರಾದ ಬಿ.ಐ. ಪಾಟೀಲ್‌ರವರು ಭಾಷಣ ಮಾಡತಕ್ಕಂಥ ಕಾಲದಲ್ಲಿ ಈ ಸದನದ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್‌ರವರ ವಿಚಾರದಲ್ಲಿ ಹೇಳಿರುವ "Shri Vatal Nagaraj who is disturbing the communal harmony of the State on the issue of language and caste"... ಅನ್ನುವ ಪದಗಳನ್ನು ನಾನು ವರದಿಯಿಂದ ತೆಗೆದುಹಾಕುತ್ತಿದ್ದೇನೆ.

1991-92ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

ಶ್ರೀ ಜಿ. ರಾಜೂಗೌಡ (ಹನೂರ್) : ಸನ್ಮಾನ್ಯ ಸಭಾಧ್ಯಕ್ಷರೇ ಈ ಸದನದ ಮುಂದೆ ಮಂಡಿಸಿರತಕ್ಕ 1991-92ನೇ ಸಾಲಿನ ಆಯವ್ಯಯವನ್ನು ಸಂಪೂರ್ಣವಾಗಿ ನಾನು ಸಮರ್ಥಿಸುತ್ತ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಸುತ್ತೇನೆ. ಹಳ್ಳಿಯಲ್ಲಿ ಒಂದು ಗಾದೆ ಇದೆ. 'ಆಡು ಮುಟ್ಟದ ಸೊಪ್ಪಿಲ್ಲ ನನ್ನ ಸರ್ಕಾರ ಸಾಧಿಸದ ಪ್ರಗತಿಯಿಲ್ಲ' ಎನ್ನುವ ಹಾಗೆ 1991-92ನೇ ಸಾಲಿನ ಆಯವ್ಯಯವು ಸಮಾಜದ ಬಡವರ, ದುರ್ಬಲ ವರ್ಗದವರ ಏಳಿಗೆಗಾಗಿ ದೃಢ ಹಾಗೂ ಜನಪರ ತೀರ್ಮಾನಗಳನ್ನು ಕೈಗೊಂಡಿದೆ. ಕರ್ನಾಟಕದ ಸರ್ವತೋಮುಖ ಏಳಿಗೆ, ಅಭಿವೃದ್ಧಿಗೆ ಹೊಸ ಚಾಲನಾ ಶಕ್ತಿಯನ್ನು ಕೊಡುವಂತಾಗಿದೆ. ದುರ್ಬಲ ವರ್ಗದವರ ಏಳಿಗೆಗಾಗಿ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕನ್ನಡಿಗರ ಹಿತ ರಕ್ಷಣೆ, ರೈತರಿಗೆ ನೆರವು ಕೋಮು ಸೌಹಾರ್ದತೆ ಕಾಪಾಡಲು ಬೇಕಾದ ಕಾರ್ಯಕ್ರಮಗಳಿಗೆ ಅಗ್ರ ಪ್ರಾಶಸ್ತ್ಯವನ್ನು ನೀಡಲಾಗಿದೆ. ಕೃಷಿ ಉತ್ಪನ್ನ ವೃದ್ಧಿಸುವ, ವಿದ್ಯುತ್ತಿನ ಉತ್ಪಾದನೆ ಹೆಚ್ಚಿಸುವ, ಬಡತನ ನಿವಾರಿಸುವ, ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಕಾರ್ಯಕ್ರಮಗಳು ವ್ಯವಸ್ಥಿತವಾದ ಜಾರಿಗಾಗಿ ಈ ಆಯವ್ಯಯ ಬದ್ಧವಾಗಿದೆ. ಶೇಕಡ 50ರಷ್ಟನ್ನು ಕೃಷಿ, ಗ್ರಾಮೀಣಾಭಿವೃದ್ಧಿ ವಿದ್ಯುತ್ತಿನ ಉತ್ಪಾದನೆ, ನೀರಾವರಿ ಹಾಗೂ ಪ್ರವಾಸೋದ್ಯಮಕ್ಕೆ ಈ ಆಯವ್ಯಯದಲ್ಲಿ ಮೀಸಲಾಗಿಟ್ಟಿದೆ. ಸುಮಾರು 12 ಲಕ್ಷ ಜನರು ನಿರುದ್ಯೋಗಿಗಳ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿದ್ದಾರೆ. ಇವರುಗಳಿಗೆ ವಿವಿಧ ಇಲಾಖೆಗಳ ಮುಖಾಂತರ ಕೆಲಸಗಳನ್ನು ಒದಗಿಸಲು ಸುಮಾರು 239.83 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಎರಡನೆಯದು ಅಕ್ಷರ ಯೋಜನೆ. ಮುಂದಿನ ಶೈಕ್ಷಣಿಕ ವರ್ಷದಿಂದ ನಮ್ಮ ರಾಜ್ಯದಲ್ಲಿ ಒಂದನೇ ತರಗತಿಯಿಂದ 7ನೇ ತರಗತಿಯವರೆಗೆ ಎಲ್ಲಾ ಮಕ್ಕಳಿಗೂ ಮಧ್ಯಾಹ್ನದ ಊಟವನ್ನು ನೀಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಸುಮಾರು 20 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಿಂದ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಾಗುವುದಲ್ಲದೆ ಪಾಠಶಾಲೆಗಳಲ್ಲಿ ಅರ್ಧಕ್ಕೆ ಬಿಟ್ಟು ಹೋಗುವವರ ಮಕ್ಕಳ ಸಂಖ್ಯೆ ಕಡಿಮೆ ಯಾಗುತ್ತದೆಂದು ನನ್ನ ಅಭಿಪ್ರಾಯ. ಇದರ ಜೊತೆಗೆ ಪೌಷ್ಟಿಕ ಆಹಾರ ಮಕ್ಕಳಿಗೆ ಸಿಗುವುದರಿಂದ ಮಕ್ಕಳ

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಇದಿನಬ್ಬ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು).

ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆಯಾಗುತ್ತಿದೆ. ಆಮೇಲೆ, ಸರ್ಕಾರದ ಮತ್ತೊಂದು ಮುಖ್ಯವಾದ ಕಾರ್ಯಕ್ರಮವೆಂದರೆ, ಎಲ್ಲರಿಗೂ ವೈದ್ಯಕೀಯ ತಪಾಸಣೆ ಸುಮಾರು ಎರಡು ಸಾವಿರ ಇಸವಿಯೊಳಗೆ ಪ್ರತಿಯೊಬ್ಬರಿಗೂ ಆರೋಗ್ಯ ಕೊಡಬೇಕೆನ್ನುವ

ದೃಷ್ಟಿಯಿಂದ ಯಾರು ವೈದ್ಯಕೀಯ ತಪಾಸಣೆಗೆ ಮುಂದೆ ಬರುತ್ತಾರೋ ಅವರನ್ನು ತಪಾಸಣೆಮಾಡಿ ಒಂದು ವೇಳೆ ಬಡವರಲ್ಲಿ ಈ ರೋಗದ ಕುರುಹು ಕಂಡರೆ ಪ್ರಾಥಮಿಕ ಹಂತದಲ್ಲೇ ಅವರಿಗೆ ಅದನ್ನು ತಿಳಿಸಿ ನಂತರ ರೋಗ ಉಲ್ಬಣವಾಗದಂತೆ ನೋಡತಕ್ಕಂಥ ಈ ಕಾರ್ಯಕ್ರಮ ಏನಿದೆ ಇದು ಬಹಳ ಒಳ್ಳೆಯ ಕಾರ್ಯಕ್ರಮ ಇದಕ್ಕಾಗಿ ಸರ್ಕಾರ ಒಂದು ಕೋಟಿ ರೂಪಾಯಿ ಮೀಸಲಿಟ್ಟಿದೆ. ಇನ್ನು ಎಣ್ಣೆ ಕಾಳುಗಳನ್ನು ನಮ್ಮ ರಾಜ್ಯದಲ್ಲಿ ಸುಮಾರು 24 ಲಕ್ಷ ಹೆಕ್ಟೇರ್‌ನಲ್ಲಿ ಸುಮಾರು 15 ಲಕ್ಷ ಟನ್‌ಗಳಷ್ಟು ಎಣ್ಣೆ ಕಾಳುಗಳನ್ನು ಉತ್ಪತ್ತಿ ಮಾಡಲಾಗಿದೆ. ಪ್ರತಿ ಹೆಕ್ಟೇರ್‌ಗೆ ಸರಾಸರಿ ಉತ್ಪಾದನೆ 1986-87 ರಲ್ಲಿ 608 ಕಿಲೋಗ್ರಾಮ್‌ನಷ್ಟು ಉತ್ಪಾದನೆಯಾಗುತ್ತಿತ್ತು.

ಅದೇ 1989-90ರಲ್ಲಿ ಪ್ರತಿ ಹೆಕ್ಟೇರ್‌ಗೆ 719 ಕಿಲೋಗ್ರಾಂಗಳಿಗೆ ಹೆಚ್ಚಿದೆ. ಇದರ ಜೊತೆಗೆ ತಾಳೆ ಎಣ್ಣೆ ಉತ್ಪಾದನೆಯನ್ನು ಹೆಚ್ಚು ಮಾಡತಕ್ಕಂಥ ಉದ್ದೇಶದಿಂದ ಸರ್ಕಾರವು ಅನೇಕ ಯೋಜನೆಗಳನ್ನು ರೂಪಿಸಿದೆ. ಒಂದು ಲಕ್ಷ ಹೆಕ್ಟೇರ್‌ನಲ್ಲಿ ತಾಳೆ ಕೃಷಿ ಮಾಡಲು ಒಂದು ಕೇಂದ್ರ ಪುರಸ್ಕೃತ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯ ವೆಚ್ಚದ 50ರಷ್ಟು ಹಣವನ್ನು ಭಾರತ ಸರ್ಕಾರ ಭರಿಸುತ್ತದೆ. ಇದಕ್ಕೆ ತಗಲುವ ವೆಚ್ಚ 708.48 ಲಕ್ಷ ರೂಪಾಯಿಗಳು. 1991-92ರಲ್ಲಿ ಇದಕ್ಕೆ 76 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ.

ಇದು ಗ್ರಾಮೀಣ ಹಾಗೂ ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಗ್ರಾಮೀಣ ನೀರು ಕುರಿತು ಟೆಕ್ನಾಲಜಿ ಮೆಷಿನ್ ಕಾರ್ಯಕ್ರಮವನ್ನು ಕಲ್ಬುರ್ಗಿ ರಾಯಚೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ. ಇದರಿಂದ ಸುಮಾರು 922 ಗ್ರಾಮಗಳು ಈ ಕಾರ್ಯಕ್ರಮದ ವ್ಯಾಪ್ತಿಗೆ ಬರುತ್ತವೆ. ಮುಂದಿನ ಎರಡು ವರ್ಷಗಳಲ್ಲಿ ಈ ಟೆಕ್ನಾಲಜಿ ರೂಪಿಸಿದ ಕಾರ್ಯಕ್ರಮಗಳ ವ್ಯಾಪ್ತಿಗೆ ಕೋಲಾರ, ತುಮಕೂರು, ಬಳ್ಳಾರಿ, ಶಿವಮೊಗ್ಗ, ಬೀದರ್, ಉತ್ತರ ಕನ್ನಡ ಮತ್ತು ಹಾಸನಗಳನ್ನು ಒಳಪಡಿಸಲು ಉದ್ದೇಶಿಸಲಾಗಿದೆ. ವಿಶ್ವಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮ, ನೈರ್ಮಲ್ಯ ಹಾಗೂ ಆರೋಗ್ಯದ ಶಿಕ್ಷಣ ಇತ್ಯಾದಿಗಳ ವ್ಯಾಪ್ತಿಗೆ 14.50 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸುಮಾರು 10 ಜಿಲ್ಲೆಗಳಿಗೆ ತರಲು ಉದ್ದೇಶ ಮಾಡಲಾಗಿದೆ. 1990-91ನೇ ಸಾಲಿಗೆ ನಗರ ಪ್ರದೇಶಗಳಿಗೆ ಕುಡಿಯುವ ನೀರು ಸರಬರಾಜಿಗೆ ಸಂಬಂಧಪಟ್ಟಂತೆ 25.17 ಕೋಟಿ ರೂಪಾಯಿಗಳು ಇದ್ದರೆ 1991-92ನೇ ಸಾಲಿಗೆ ಈ ಮೊತ್ತವನ್ನು ಸುಮಾರು 38.83 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಇದ್ದರಿಂದ ಪ್ರತಿ ಒಂದು ಗ್ರಾಮದಲ್ಲಿ ಸಹ ಈ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂಬ ಪೂರಕ ದೃಷ್ಟಿಯಿಂದ ನಾವು ನಮ್ಮ ಆಯವ್ಯಯದಲ್ಲಿ ಇದನ್ನು ಸೇರಿಸಿದ್ದೇವೆ. ಕರ್ನಾಟಕದ ರಾಜಧಾನಿ ಬೆಂಗಳೂರಿನ ಬಗ್ಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ಕರ್ನಾಟಕದ ರಾಜಧಾನಿ ಆದ ಬೆಂಗಳೂರಿಗೆ ತನ್ನದೇ ಆದ ಅನೇಕ ಸಮಸ್ಯೆಗಳಿದೆ. ಕಳೆದ ಎರಡು ವರ್ಷಗಳಲ್ಲಿ ಔದ್ಯಮೀಕರಣ ಮತ್ತು ಜನರ ವಲಸೆಯಿಂದಾಗಿ ಬೆಂಗಳೂರು ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ದಿನೇ ದಿನೇ ಬೆಂಗಳೂರು ನಗರದಲ್ಲಿ ಕುಡಿಯುವ ನೀರು ವಿದ್ಯುತ್‌ನಷ್ಟೇ ಸಂಚಾರ ಸೌಲಭ್ಯಗಳು ಸಹ ಬಿಗಡಾಯಿಸಿದೆ. ನಗರವು ದಿಕ್ಕು ದಿಸೆ ಇಲ್ಲದೇ ಅಸ್ತವ್ಯಸ್ತವಾಗಿ ಬೆಳೆಯುತ್ತಿದೆ. ಪ್ರತಿದಿನ ಸರಾಸರಿ ಮುನ್ನೂರು ವಾಹನಗಳ ನೊಂದಣಿ ಆಗುತ್ತಿತ್ತು ಆದರೆ ಕಳೆದ ಮೂರು ವರ್ಷಗಳಲ್ಲಿ ಇದು ಮೂರು ಪಟ್ಟಿಗೂ ಹೆಚ್ಚು ಆಗಿದೆ. ವಾಹನ ಸಂದಣಿ ವಿಪರೀತ ಆಗಿದೆ. ಸಂಚಾರ ದಟ್ಟಣೆಯಿಂದಾಗಿ ಬೆಂಗಳೂರಿನ ಭಾಗಗಳು ಕಿಷ್ಕಿಂದ ಆಗಿವೆ. ಕಿರು ರಸ್ತೆಗಳು, ಹೊಸ ಮನೆಗಳ ನಿರ್ಮಾಣ ಕೂಡ ಸಂಚಾರ ಒತ್ತಡಕ್ಕೆ ಕಾರಣ ಆಗಿದೆ.

ಬೆಂಗಳೂರಿನ ಬೆಳೆಯುತ್ತಿರುವ ಸಮಸ್ಯೆಗಳಿಗೆ ಅದರಲ್ಲಿಯೂ ದಟ್ಟ ವಾಹನ ಸಂಚಾರಕ್ಕೆ ಪರಿಹಾರ ಎಂದರೆ ಸುರಂಗಗಳು, ಫ್ಲೈ ಓವರ್‌ಗಳು ಮತ್ತು ಸಬ್‌ವೇಗಳು ಇವುಗಳ ಮೂಲಕ ಬೆಂಗಳೂರು ನಗರದ ವಾಹನ ದಟ್ಟಣೆಯನ್ನು ಕಡಿಮೆ ಮಾಡಲು ಸಹ ಹಲವಾರು ಯೋಜನೆಗಳ ಮೂಲಕ ಉದ್ದೇಶಿಸಲಾಗಿದೆ. ಈಗ ಬೆಂಗಳೂರು ಸಮಗ್ರ ಅಭಿವೃದ್ಧಿ ನಿಗಮ ನಿಧಿ ಸ್ಥಾಪಿಸುವ ಇಟ್ಟುಕೊಂಡರೆ. ವಾಹನ ಸಂಚಾರ ಕುಡಿಯುವ ನೀರು ಕೊಳೆಗೇರಿಗಳು ಮುಂತಾದವುಗಳಿಗೆ ಸಂಬಂಧಿಸಿದಂತೆ ನಗರದ ತುರ್ತು ಅಗತ್ಯಗಳನ್ನು ಗಮನಿಸಿ ಯೋಜನೆಗಳನ್ನು ಕಾರ್ಯಗತ ಮಾಡಲು ಉದ್ದೇಶಿಸಿದ 100 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲಾಗುವುದು. ಇದು ಬೆಂಗಳೂರು ಸಮಗ್ರ ಅಭಿವೃದ್ಧಿ ನಿಗಮದ ನಿಧಿಗೆ ಬೇರೆ ಕಡೆಯಿಂದ ಸುಮಾರು 100 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲು ಸರ್ಕಾರ ಯೋಜನೆ ಮಾಡಿದೆ. ಉದ್ಯೋಗ ವೆಚ್ಚದ ಬಗ್ಗೆ ಹೇಳುವುದಾದರೆ ಜವಾಹರ್ ರೋಜಗಾರ್ ಯೋಜನೆ ನೆಹರು ರೋಜ್‌ಗಾರ್ ಯೋಜನೆ ಪಶ್ಚಿಮ ಘಟ್ಟ ಅಭಿವೃದ್ಧಿ ಕಾರ್ಯಕ್ರಮ ಬರಪೀಡಿತ ಪ್ರದೇಶಗಳ ಕಾರ್ಯಕ್ರಮ ಕೆರೆಗಳ ಹೂಳೆತ್ತುವ ಕಾರ್ಯಕ್ರಮ ಭೂಸಾರ ಸಂರಕ್ಷಣೆ ಜಲ ವಿಭಾಜಕ ಪ್ರದೇಶಗಳ ನಿರ್ವಹಣೆ ವನ ನಿರ್ಮಾಣ ಹೊಸ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆ ಭಾರಿ ಮಧ್ಯಮ ಮತ್ತು ಸಣ್ಣ ನೀರಾವರಿಯಂತಹ ಉದ್ಯೋಗ ನೈಜಿಸುವಂತಹ ಹಲವಾರು ಯೋಜನೆಗಳಿಗೆ ಈ ಸಾರಿ 239.83ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಹಿಂದಿನ ಎಲ್ಲ ವರ್ಷಗಳಿಗಿಂತ ರಾಜ್ಯದ ಹೆದ್ದಾರಿಗಳು, ಜಿಲ್ಲಾ ರಸ್ತೆಗಳು ಗ್ರಾಮೀಣ ರಸ್ತೆಗಳು, ಆಯಕಟ್ಟು ರಸ್ತೆಗಳು ಸೇತುವೆಗಳಿಗೆ ಹೆಚ್ಚಿನ ಹಣವನ್ನು ಒದಗಿಸಲಾಗಿದೆ. 1990-91ನೇ ಸಾಲಿನ ಯೋಜನಾ ವೆಚ್ಚಕ್ಕಿಂತ 1991-92ನೇ ಸಾಲಿನ ಯೋಜನಾ ವೆಚ್ಚ ಶೇ. 31-88ರಷ್ಟು ಹೆಚ್ಚು ಆಗಿದೆ ಎಂದರೆ 1560 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. 1990-91ರಲ್ಲಿ ಜಿಲ್ಲಾ ಪರಿಷತ್ತುಗಳಿಗೆ 300.29ಕೋಟಿ ರೂಪಾಯಿ ಇದ್ದರೆ 1991-92ಕ್ಕೆ 357.46 ಕೋಟಿ ರೂಪಾಯಿಗಳನ್ನು ಇಡಲಾಗಿದೆ.

ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ ರಾಜ್ಯ ಸರ್ಕಾರವು ಪ್ರಸ್ತುತ ಅಯವ್ಯಯದಲ್ಲಿ ವಿದ್ಯುತ್‌ಶಕ್ತಿಗೋಸ್ಕರ 371-60 ಕೋಟಿ ರೂಪಾಯಿಗಳನ್ನು ಒದಗಿಸಲಾಗುತ್ತಿದೆ. ಇದರಲ್ಲಿ ಯೋಜನಾ ವೆಚ್ಚ 235.38 ಬಂಡವಾಳ ಕಾರ್ಯಕ್ರಮಕ್ಕಾಗಿ 135.75 ಹೀಗೆ ಒಟ್ಟು 371.60 ಕೋಟಿ ರೂಪಾಯಿಗಳು. ರಾಜ್ಯದ ವಿದ್ಯುತ್ ಉತ್ಪಾದನೆ ಈಗ 11 ಸಾವಿರದ 753 ದಶಲಕ್ಷ ಯೂನಿಟ್‌ಗಳು ಇದ್ದು 1991-92ರಲ್ಲಿ 13,010 ದಶಲಕ್ಷ ಯೂನಿಟ್‌ಗಳಿಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ರಾಜ್ಯದ ಬೇಡಿಕೆ 20 ಸಾವಿರದ 600 ದಶಲಕ್ಷ ಯೂನಿಟ್‌ಗಳು. ರಾಜ್ಯದಲ್ಲಿ ಲಭ್ಯ ಇರುವ ವಿದ್ಯುತ್‌ನಲ್ಲಿ ಶೇಕಡ 10ರಷ್ಟು ಕೃಷಿಗೆ ಈಗ ದೊರೆಯುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಈ ಮೂರಕ ವಿನಂತಿಸುವುದೇನೆಂದರೆ ಲಭ್ಯ ಇರುವ ವಿದ್ಯುತ್‌ನಲ್ಲಿ ಕೊನೆಯ ಪಕ್ಷ ಶೇಕಡ 20ರಷ್ಟು ವಿದ್ಯುತ್ತನ್ನು ಕೃಷಿ ವಲಯಕ್ಕೆ ಮೀಸಲಾಗಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಪ್ರಸ್ತುತ ಸಾಲಿನಲ್ಲಿ ಕೆಇಬಿಯು ಹಾಕಿರುವ ವಿದ್ಯುದೀಕರಣ ಯೋಜನೆ ಬಗ್ಗೆ ಒಂದೆರಡು ಮಾತು ಹೇಳಲು ಇಚ್ಛಿಸುತ್ತೇನೆ ಅವರ ಕಾರ್ಯಕ್ರಮದ ಪ್ರಕಾರ ಪ್ರಸ್ತುತ ಸಾಲಿನಲ್ಲಿ 400 ಸಣ್ಣ ಹಳ್ಳಿಗೆ 600 ಹರಿಜನ ಬಸ್ತಿಗೆ 20000 ಭಾಗ್ಯಜ್ಯೋತಿ 527 ಬುಡಕಟ್ಟು ಕಾಲೋನಿ 30 ಸಾವಿರ ಸರ್ವಿಸ್ ಸೆಂಟರ್‌ಗಳು 60 ಸಾವಿರ ಪಂಪ್‌ಸೆಟ್‌ಗಳ ಸಂದರ್ಬ ಜೊತೆಗೆ ಗ್ರಾಮಾಂತರ ವಿದ್ಯುತ್ ನಿಗಮದ ನೆರವಿನಿಂದ ಗ್ರಾಮೀಣ ವಿದ್ಯುದೀಕರಣ ಕಾರ್ಯಕ್ರಮವನ್ನು ಉಳಿದೆಲ್ಲ ಹಳ್ಳಿಗಳಿಗೂ ಕೂಡ ವಿಸ್ತರಿಸುವ ರೀತಿ ಕೆಲಸ ಮಾಡಲು ಇಚ್ಛಿಸಿದ್ದಾರೆ. ಇದು ಬಹಳ ಒಳ್ಳೆಯ ಕ್ರಮ ಇದನ್ನು ಜರುಗಿಸಿದರೆ ನಮ್ಮ ರಾಜ್ಯದ ಪ್ರತಿಯೊಂದು ಹರಿಜನ ಬಸ್ತಿಗೂ ಪ್ರತಿ ಹಳ್ಳಿ, ಪ್ರತಿ ತಾಂಡಕ್ಕೂ ಈ ವಿಧ್ಯುತ್ ಸೌಲಭ್ಯ ಸಿಗುತ್ತಿದೆ. ಮತ್ತೆ ನೀರಾವರಿ ಕೃಷಿ ಉತ್ಪನ್ನಗಳು ರಾಜ್ಯದ

ಕೃಷಿ ಉತ್ಪಾದನೆಗೆ ಕೃಷ್ಣ ಹಾಗೂ ಕಾವೇರಿ ನದಿಗಳ ಪ್ರದೇಶಗಳ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಮುಗಿಸಬೇಕಾದ ಅವಶ್ಯ ಕತೆಯನ್ನು ಎಲ್ಲ ರಾಜಕೀಯ ಪಕ್ಷಗಳೂ ಸಹ ಒಪ್ಪಿಕೊಂಡಿವೆ. 1991-92ರಲ್ಲಿ ಕೃಷ್ಣ ಕಣಿವೆ ಯೋಜನೆಗಳಿಗೆ 171 ಕೋಟಿಗಳನ್ನೂ ಕಾವೇರಿ ಕಣಿವೆ ಯೋಜನೆಗಳಿಗೆ 138 ಕೋಟಿಗಳನ್ನು ಅಂದರೆ ಒಟ್ಟು 309 ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಒದಗಿಸಲಾಗಿದೆ. ಈಗಿರುವ ಸ್ಥಿತಿಯೇನು ಎಂದು ನಾವು ಯೋಚನೆ ಮಾಡಿದಾಗ ಕೃಷ್ಣಾ ನದಿ ಯೋಜನೆಗಳಿಗೆ ಅಗತ್ಯವಾಗಿರುವ ಬಂಡವಾಳ ಸುಮಾರು 3849 ಕೋಟಿ ಇದುವರೆಗೂ ನಾವು ವೆಚ್ಚಮಾಡಿದ್ದು 1155 ಕೋಟಿ ಇನ್ನೂ 2684 ಕೋಟಿ ಬೇಕು. ಅಂದರೆ ಇನ್ನು ಮುಂದೆ ವರ್ಷಕ್ಕೆ 270 ಕೋಟಿ ವೆಚ್ಚ ಮಾಡಿದರೆ 10 ವರ್ಷಗಳಲ್ಲಿ ಈ ಯೋಜನೆಯನ್ನು ಮುಗಿಸಲು ಸಾಧ್ಯ ಅದೇ ರೀತಿ ಕಾವೇರಿ ನದಿಯ ಒಟ್ಟು ಯೋಜನಾ ವೆಚ್ಚ 1566 ಕೋಟಿ ಇಲ್ಲಿಯವರೆಗೆ ವೆಚ್ಚವಾಗಿರುವುದು. 705 ಕೋಟಿ ಇನ್ನೂ 850 ಕೋಟಿ ಬೇಕು. ವರ್ಷಕ್ಕೆ 213 ಕೋಟಿ ವೆಚ್ಚ ಮಾಡಿದರೆ ಇನ್ನು ನಾಲ್ಕು ವರ್ಷಗಳಲ್ಲಿ ಮುಗಿಸಬಹುದು.

ಸಹಕಾರ ಕ್ಷೇತ್ರದಲ್ಲಿ ಕೂಡ ಏತನೀರಾವರಿ ಯೋಜನೆಗಳನ್ನು ಸರ್ಕಾರ ಕೈಗೆತ್ತಿಕೊಳ್ಳಬೇಕೆಂದು ನಿರ್ಧರಿಸಿದೆ. ರಾಜ್ಯದಲ್ಲಿ ಈಗ ಸುಮಾರು 429 ಏತ ನೀರಾವರಿಗಳಿವೆ. ಅದರ ಜೊತೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ಕೂಡ ಕೆಲವು ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಉದ್ದೇಶಿಸಿದೆ. ಈ ಪರಿಶಿಷ್ಟ ಜಾತಿ ಮತ್ತು ಪಂಗಡಗಳವರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳಿಗಾಗಿ ರೂಪಿಸುವ ಯೋಜನೆ ಬಹಳ ಮುಖ್ಯವಾದದ್ದು ನಾವೇನು 90-91 ಸಾಲಿನಲ್ಲಿ ಎಷ್ಟು ಹಣ ವೆಚ್ಚ ಮಾಡಿದ್ದೇವೆಂದರೆ ಸುಮಾರು 85.11 ಕೋಟಿ ಈ ವರ್ಷ ನಾವು ಏನು ಕಾರ್ಯಕ್ರಮ ಹಾಕಿದ್ದೇವೆ ಮತ್ತು ಎಷ್ಟು ವೆಚ್ಚ ಮಾಡಬೇಕೆಂದಿದ್ದೇವೆ ಅಂದರೆ 91-92ರಲ್ಲಿ 107.7 ಕೋಟಿ ಮತ್ತೆ ಅಂಬೇಡ್ಕರ್ ಶತಮಾನದ ಅಂಗವಾಗಿ ರೂಪಿಸಿರುವ ಕಾರ್ಯಕ್ರಮಗಳಿಗೆ 30 ಕೋಟಿ ಅಂದರೆ ಒಟ್ಟಾರೆ 137.07 ಕೋಟಿ ಅಂದರೆ ಕಳೆದ ಸಾಲಿಗಿಂತ ಶೇಕಡ 55 ರಷ್ಟು ಜಾಸ್ತಿ ಹಣವನ್ನು ಆ ವರ್ಗಕ್ಕಾಗಿ ಖರ್ಚು ಮಾಡಬೇಕೆಂದಿರುವುದು ಬಹಳ ಶುಭ ಲಕ್ಷಣ ಎಂದು ಎಲ್ಲರೂ ಒಪ್ಪಿಕೊಳ್ಳಬೇಕು. ಯಾವ ರೀತಿ ನಾವು ಖರ್ಚು ಮಾಡಬೇಕೆಂಬ ಬಗ್ಗೆ ಮಾತು ಹೇಳುತ್ತೇನೆ. ದೇವದಾಸಿಯರ ಪುನರ್‌ವ್ಯವಸ್ಥೆ ಕಲ್ಪಿಸುವುದು ಸೇರಿದಂತೆ ಡಾ. ಅಂಬೇಡ್ಕರ್ ಶತಮಾನೋತ್ಸವ ಆಚರಣಾಂಗವಾಗಿ ಸುಮಾರು 30 ಕೋಟಿ ವಿಶೇಷ ಘಟಕ ಕಾರ್ಯಕ್ರಮ ನಿಧಿಯನ್ನು ನಾವು ರೂಪಿಸಿದ್ದೇವೆ, ಅದರಲ್ಲಿ ಪರಿಶಿಷ್ಟ ಜಾತಿ ಮನೆಗಳ ನಿರ್ಮಾಣಕ್ಕೆ 15 ಕೋಟಿ ಪರಿಶಿಷ್ಟ ವಿದ್ಯಾರ್ಥಿ ನಿಲಯದ ನವೀಕರಣಕ್ಕೆ 3 ಕೋಟಿ ಹೊಸ ವಿದ್ಯಾರ್ಥಿ ನಿಲಯಗಳಿಗೆ 3.8 ಕೋಟಿ ದೇವದಾಸಿಯರ ಪುನರ್ವಸತಿಗೆ 2 ಕೋಟಿ ಪರಿಶಿಷ್ಟ ಜಾತಿ ಜಮೀನಿಗೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದಕ್ಕಾಗಿ 1 ಕೋಟಿ ಮತ್ತೆ ಪರಿಶಿಷ್ಟ ಜಾತಿಯವರಿಗೆ ಭೂಮಿಯನ್ನು ಕೊಂಡು ಹಂಚುವುದಕ್ಕೆ 1 ಕೋಟಿ ಅಂದರೆ ಆ ವರ್ಗದಲ್ಲಿ ಯಾರು ಕೃಷಿ ಕಾರ್ಮಿಕರಿದ್ದಾರೆ ಅವರನ್ನು ಭೂಹಿಡುವಳಿದಾರರನ್ನಾಗಿ ಮಾಡುವ ಕಾರ್ಯಕ್ರಮ ಇದು; ಇದು ವಿಶೇಷವಾದದ್ದು ಯಾವಾಗಲೂ ಇದನ್ನು ಮಾಡಿಲ್ಲ. ಇಂತ ಹೊಸ ಕಾರ್ಯಕ್ರಮವನ್ನು ನಾವು ರೂಪಿಸಿದ್ದೇವೆ.

ಯಾರು ಭೂಮಿಯನ್ನು ತೆಗೆದುಕೊಳ್ಳಬೇಕೆಂದು ಮುಂದೆ ಬರ್ತಾರೋ ಅಂಥವರಿಗೆ ನಮ್ಮ ಬಜೆಟ್‌ನಲ್ಲಿ 1 ಕೋಟಿ ಮೀಸಲಾಗಿಟ್ಟಿರುವುದರಿಂದ ಈ ಹಣದಿಂದ ಸಹಾಯ ಮಾಡಿ ಅವರನ್ನು ಭೂಒಡೆಯರನ್ನಾಗಿ ಮಾಡುವ ವಿಶಿಷ್ಟ ಕಾರ್ಯಕ್ರಮ ಇದು. ಮತ್ತೆ 91-92ರ ಅವಧಿಯಲ್ಲಿ ಸರ್ಕಾರ ಅಂಬೇಡ್ಕರ್ ಭವನದ ನಿರ್ಮಾಣಕ್ಕಾಗಿ ಸುಮಾರು 20 ಲಕ್ಷ ರೂ.ಗಳನ್ನು ನಿಗದಿಗೊಳಿಸಲಾಗಿದೆ. 91-92ನೇ ಸಾಲಿನಲ್ಲಿ ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದವರಿಗೆ ಸುಮಾರು 57 ಹೊಸ ವಿದ್ಯಾರ್ಥಿನಿಲಯಗಳನ್ನು ತೆರೆಯಲು

ಯೋಚಿಸಲಾಗಿದೆ. ಮತ್ತು 10 ಅಶ್ರಮ ಶಾಲೆಗಳನ್ನು 7 ವಸತಿ ಶಾಲೆಗಳನ್ನು ತೆರೆಯಲು ಯೋಚಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭಿವೃದ್ಧಿ ನಿಗಮಕ್ಕೆ 1990-91ರಲ್ಲಿ 53.95 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ, ಆ ವೆಚ್ಚದಲ್ಲಿ ಸುಮಾರು 30,048 ಫಲಾನುಭವಿಗಳಿಗೆ ನೆರವು ನೀಡುವ ಗುರಿಯನ್ನು ಇಟ್ಟುಕೊಂಡಿದ್ದಾರೆ ಈ ವರ್ಷ ಪ್ರಸ್ತುತ ಸಾಲಿನಲ್ಲಿ 1991-92ರಲ್ಲಿ ಯೋಜನೆ ವೆಚ್ಚವು 130ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. 44,800 ಜನ ಫಲಾನುಭವಿಗಳಿಗೆ ನೆರವು ನೀಡತಕ್ಕಂಥ ಉದ್ದೇಶವನ್ನು ಗುರಿಯನ್ನು ನಾವು ಇಟ್ಟುಕೊಂಡಿದ್ದೇವೆ. ಹಾಗೆಯೆ ಹರಿಜನಕೇರಿ ಲಂಬಾಣಿ ತಾಂಡಾ ವಡ್ಡರಕೇರಿ ಮುಂತಾದ ಸ್ಥಳಗಳಲ್ಲಿರುವ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಒಂದು ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ಹಿಂದುಳಿದ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಹಿಂದುಳಿದ ಪ್ರದೇಶವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಅಳವಡಿಸಲು ಯೋಜನಾ ಆಯೋಗದವರು ಒಪ್ಪಿಕೊಂಡಿರುತ್ತಾರೆ.

ಈ ವರ್ಷದಲ್ಲಿ ಅದಕ್ಕಾಗಿ 50 ಕೊಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಅದೇ ರೀತಿಯಲ್ಲಿ ಗಡಿ ಪ್ರದೇಶಾಭಿವೃದ್ಧಿಗಾಗಿ 10 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ. ಅಂತೆಯೇ ಮಲೆನಾಡು ಪ್ರದೇಶ ಕೂಡ ಅಷ್ಟು ಅಭಿವೃದ್ಧಿಯನ್ನು ಹೊಂದಿಲ್ಲ ಅದಕ್ಕಾಗಿ ಒಂದು ಅಭಿವೃದ್ಧಿ ಮಂಡಳಿಯನ್ನು ರಚಿಸತಕ್ಕಂಥಾದ್ದು ಸ್ವಾಗತಾರ್ಹವಾದ ವಿಚಾರವಾಗಿದೆ. ನಮ್ಮ ಬಜೆಟ್‌ನಲ್ಲಿ ವಿಶೇಷವಾಗಿ ರೂಪಿಸಿಕೊಂಡಿರತಕ್ಕಂಥ ಕಾರ್ಯಕ್ರಮಗಳಲ್ಲಿ ಹಲವಾರು ಸಾಮಾಜಿಕ ಕಾರ್ಯಕ್ರಮಗಳನ್ನು ನಾವು ಇಟ್ಟುಕೊಂಡಿದ್ದೇವೆ. ಇದು ಬಹಳ ಮುಖ್ಯವಾದಂಥ ಕಾರ್ಯಕ್ರಮಗಳು. ಸುಮಾರು ನಮ್ಮ ಖಜಾನೆಗೆ 16 ಕೋಟಿ ರೂಪಾಯಿಗಳ ಹೋರೆ ಇದರಿಂದ ಬರುತ್ತದೆ. ಸರಕಾರದವರು ಅದೇ ರೀತಿಯಲ್ಲಿ ನಿರಾಶ್ರಿತರಿಗೆ ಅಂಗವಿಕಲರಿಗೆ ಕೊಡುತ್ತಿದ್ದ ಮಾಸಿಕವೇತನವನ್ನು 50 ರಿಂದ 75 ರೂಪಾಯಿಗಳಿಗೆ ಏರಿಸಿದ್ದಾರೆ ಹಾಗೆಯೇ ಕೃಷಿ ಪಾಸ್ ಪುಸ್ತಕಗಳನ್ನು ರೈತರುಗಳಿಗೆ ಒದಗಿಸಿಕೊಟ್ಟಿದೆ. ತನ್ಮೂಲಕ ಅವರ ಚರಸ್ಥಿರ ಆಸ್ತಿಗಳ ಹಕ್ಕುಪತ್ರಗಳಿಗೆ ಸೂಕ್ತ ರೀತ್ಯಾ ಖಾತರಿಯನ್ನು ಕೊಡಲಾಗಿದೆ. ಇದೊಂದು ರೀತಿಯಲ್ಲಿ ರೈತರಿಗೆ ಸರಕಾರದ ಉಗಾದಿಯ ಕೊಡುಗೆ ಎಂದು ಹೇಳಬಹುದು. ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸತಕ್ಕಂಥ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದ್ದಾರೆ. ಗ್ರಾಮಸಹಾಯಕರ ವೇತನವನ್ನು 300 ರಿಂದ 500ಕ್ಕೆ ಏರಿಸಿದೆ. ರೈತರಿಗೆ ವಿದ್ಯುತ್‌ಶಕ್ತಿಯ ರಿಯಾಯಿತಿಯನ್ನು ಕೊಟ್ಟಿದೆ. ಮತ್ತು 132 ಕೋಟಿ ರೂಪಾಯಿಗಳ ರೈತರ ಸಾಲವನ್ನು ಮನ್ನಾ ಮಾಡಲಾಗಿದೆ 'ಡಿ' ದರ್ಜೆಯ ಮಾಜಿ ಗೇಣಿದಾರರು ಸಂದಾಯ ಮಾಡಬೇಕಾದಂಥ ಗೇಣಿ ಕಂತನ್ನು ಮಾಫಿ ಮಾಡಲಾಗಿದೆ.

ತುಂಡುಭೂಮಿ ನಿಷೇದ ಕಾಯಿದೆಯನ್ನು ರದ್ದು ಮಾಡಿದ್ದು ಮುಂತಾದ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಸರಕಾರಿ ನೌಕರರ ನಿವೃತ್ತಿ ವಯಸ್ಸನ್ನು 58ಕ್ಕೆ ಉಳಿಸಿಕೊಂಡು ಸರಕಾರಿ ನೌಕರರಿಗೆ ನೆರವಾಗುವ ನಿರ್ಧಾರವನ್ನು ತೆಗೆದುಕೊಂಡಿರುವುದನ್ನು ಸರಕಾರಿ ನೌಕರರು ತುಂಬು ಹೃದಯದಿಂದ ಸ್ವಾಗತಿಸಿದ್ದಾರೆ. ಸುಮಾರು 5 ಲಕ್ಷ ಜನರಿಗೆ 720 ಕೋಟಿ ರೂಪಾಯಿಗಳನ್ನು ನಾವು ವೇತನ ರೂಪದಲ್ಲಿ ಕೊಡುತ್ತಾ ಇದ್ದೇವೆ. ಇಂಥ ಸಂಧರ್ಭದಲ್ಲಿ ಅವರಿಂದ ದಕ್ಷ ಹಾಗೂ ಪ್ರಾಮಾಣಿಕ ಸೇವೆಯನ್ನು ನಿರೀಕ್ಷಿಸುವುದು ಸಹಜವಾಗಿದೆ. ಅದುದರಿಂದ ಸರಕಾರಿ ನೌಕರರು ಯಾವ ಆಸೆ-ಆಮಿಶಗಳಿಗೆ ಬಲಿಯಾಗದೆ ಪ್ರಾಮಾಣಿಕವಾಗಿ ಕೆಲಸ ಮಾಡುವುದಾಗಿ ಪ್ರಮಾಣ ಮಾಡಬೇಕು ಮತ್ತು 15 ವರ್ಷಗಳ ಕಾಲ ಒಂದೇ ಹುದ್ದೆಯಲ್ಲಿದ್ದರೆ ಅವರಿಗೆ ಸ್ವಾಭಾವಿಕವಾಗಿ ಒಂದು ಬಡ್ತಿಯು ಸಿಗುವ ಹಾಗೆ ಒಂದು ವ್ಯವಸ್ಥೆಯನ್ನು ನಮ್ಮ ಸರಕಾರದವರು ಮಾಡುತ್ತಾ ಇದ್ದಾರೆ. ಅಡಳಿತ ಯಂತ್ರವು ಸರಿಯಾಗಿ ಮತ್ತು ಸಮರ್ಪಕವಾಗಿ

ನಡೆಯಲು ನಮ್ಮ ನೌಕರ ವರ್ಗದವರ ಸಹಾಯವು ಅಗತ್ಯವಾಗಿದೆ. ಸರಕಾರದ ಯಾವುದೇ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದು ಅವರ ಜವಾಬ್ದಾರಿಯಾಗಿರುತ್ತದೆ. ಅದೇ ರೀತಿಯಲ್ಲಿ ಇನ್ನೂ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ನಾವು ಇದರಲ್ಲಿ ಹಾಕಿಕೊಂಡಿದ್ದೇವೆ. ಬಹುಶಃ ಯಾವುದೇ ಒಂದು ಬಜೆಟ್ ಸರಿಯಾದ ದಿಕ್ಕಿನಲ್ಲಿ ಹೋಗುತ್ತಿದೆಯೇ ಎಂಬುದನ್ನು ನೋಡಬೇಕಾಗಿದ್ದರೆ ಆರ್ಥವ್ಯವಸ್ಥೆಯ ಪ್ರಮುಖ ಅಂಗಗಳಾದಂತಹ ಕೃಷಿ ನೀರಾವರಿ ವಿದ್ಯುಚ್ಛಕ್ತಿ ಕ್ಷೇತ್ರಗಳಲ್ಲಿ ಪ್ರತಿವರ್ಷವೂ 5 ಪರಸೆಂಟ್‌ನಷ್ಟು ಜಾಸ್ತಿ ಪ್ರಗತಿಯನ್ನು ಸಾಧಿಸಿದ್ದರೆ ಅದು ನಿಜವಾಗಿರತಕ್ಕಂಥ ಅಯವ್ಯಯ ಎಂದು ಹೇಳಬಹುದು. ನಮ್ಮ ವಿರೋಧ ಪಕ್ಷದವರು ಇಂದು ಇದ್ದರೆ ಈ ನಮ್ಮ ಬಜೆಟ್ ಯಾವ ದಿಕ್ಕಿನಲ್ಲಿ ಯಾವ ದೃಷ್ಟಿಕೋನ ಇಟ್ಟುಕೊಂಡು ನಡೆಯುತ್ತಿದೆ ಅದರಲ್ಲಿನ ಲೋಪದೋಷಗಳು ಏನು? ಎಂಬುದನ್ನು ಚರ್ಚಿಸಿ ಸಲಹೆಗಳನ್ನು ಕೊಡಬೇಕಾಗಿತ್ತು. ಅದೆಲ್ಲವನ್ನೂ ಸರಕಾರದವರು ಗಮನದಲ್ಲಿ ತೆಗೆದುಕೊಂಡು ಉತ್ತರವನ್ನು ಕೊಡಲು ಸಾಧ್ಯವಾಗುತ್ತಿತ್ತು. ಆದರೆ ಅವರುಗಳು ಇಲ್ಲ ಒಟ್ಟಿನಲ್ಲಿ ನಾನು ತಿಳಿದ ಮಟ್ಟಿಗೆ ಹತ್ತಾರು ವರ್ಷಗಳಿಂದ ಈ ಸದನದ ಮುಂದೆ ಮಂಡಿಸಿರುವ ಬಜೆಟ್‌ಗಳಿಗಿಂತಲೂ ಈ ವರ್ಷದ 1991-92ನೇ ಸಾಲಿನ ಬಜೆಟ್ ಉತ್ತಮವಾಗಿರತಕ್ಕಂಥ ಬಜೆಟ್ ಮತ್ತು ಪ್ರಗತಿಪರವಾಗಿರತಕ್ಕಂಥ ಬಜೆಟ್ ಆಗಿದ್ದು ಇದು ಬಡವರ ದಲಿತರ ಏಳಿಗೆಗಾಗಿ ಇರುವ ಬಜೆಟ್ ಎಂದು ಹೇಳಬಯಸುತ್ತೇನೆ.

ಹಳ್ಳಿಯಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. "ಆಡು ಮುಟ್ಟದ ಸೊಪ್ಪಿಲ್ಲ" ಎಂದು ಅದೇ ರೀತಿ ನನ್ನ ಸರ್ಕಾರ ಸಾಧಿಸದೇ ಇರತಕ್ಕಂಥ ಪ್ರಗತಿ ಇಲ್ಲ ಎಂದು ನಾನು ಮೊದಲೇ ಹೇಳಿದೆ. ಪ್ರತಿಯೊಂದು ಕ್ಷೇತ್ರದಲ್ಲೂ ಕೂಡಾ ಅಭಿವೃದ್ಧಿಯನ್ನು ಮಾಡಬೇಕು ಎಂದು ಎಲ್ಲಾ ಕ್ಷೇತ್ರಗಳಲ್ಲೂ ಕೂಡಾ ಸರ್ಕಾರವು ಕೈಹಾಕಿರುವುದರಿಂದ ಇಂಥ ಒಂದು ಅಪೂರ್ವವಾಗಿರತಕ್ಕಂಥ ಬಜೆಟ್ ಮಂಡನೆ ಆಗಿದೆ. ಇಂಥ ಬಜೆಟ್ ಅನ್ನು ಕಳೆದ ಹತ್ತಾರು ವರ್ಷಗಳಿಂದ ಯಾರೂ ಮಂಡಿಸಿಲ್ಲ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರಿಗೆ ಇಂಥ ಒಂದು ಸಮಗ್ರವಾಗಿರತಕ್ಕಂಥ ನಾನಾ ವರ್ಗಗಳ ಅನುಕೂಲತೆಗೆ ಹಿತವಾಗಿರತಕ್ಕಂಥ ಒಂದು ಬಜೆಟ್‌ನ್ನು ಮಂಡಿಸಿದ್ದಕ್ಕಾಗಿ ನಾನು ವಂದಿಸಿ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಕುಶಾಲ (ಸುಳ್ಯ): ಮಾನ್ಯ ಅಧ್ಯಕ್ಷರೇ. 1991-92ನೇ ಸಾಲಿನ ವಾರ್ಷಿಕ ಆಯುವ್ಯಯ ಮಂಜೂರಾತಿಯನ್ನು ನಾನು ಸ್ವಾಗತಿಸುತ್ತಾ ಎರಡು ಮಾತುಗಳನ್ನು ಆಡುವುದಕ್ಕೆ ಬಯಸುತ್ತೇನೆ. ಮುಖ್ಯವಾಗಿ ಕಂದಾಯ ಇಲಾಖೆಯ ಬಗ್ಗೆ ಹೇಳುವುದಾದರೆ ಕಂದಾಯ ಇಲಾಖೆಯಲ್ಲಿ ಕೂಡಾ ನಮ್ಮ ಸರ್ಕಾರ ಕಳೆದ ಮೂರು-ನಾಲ್ಕು ತಿಂಗಳಲ್ಲಿ ಕರ್ನಾಟಕ ರಾಜ್ಯದಲ್ಲಿರುವಂಥ ಬಡ ಆದ್ಯೇದಾರರ ಬಗ್ಗೆ ಹಚ್ಚಿನ ಒಂದು ಕಾಳಜಿಯನ್ನು, ಮುತುವರ್ಜಿಯನ್ನು ವಹಿಸಿ ಸರ್ಕಾರ ಅವರನ್ನು ಖಾಯಂ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಮೊಟ್ಟ ಮೊದಲನೆಯದಾಗಿ ಹಮ್ಮಿಕೊಂಡು ರಾಜ್ಯದಲ್ಲಿರುವಂಥ ಹಲವಾರು ಬಡ ಆದ್ಯೇದಾರ ರೈತರಿಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿರುವುದನ್ನು ನಾವು ಇಲ್ಲಿ ಕಾಣಬಹುದು. ಅದೇ ರೀತಿಯಲ್ಲಿ ಆದ್ಯೇದಾರರ ಪೈಕಿ ಮುಖ್ಯವಾಗಿ ಸರ್ಕಾರಿ ಜಮೀನನ್ನು ಅಕ್ರಮಿಸಿಕೊಂಡಿರುವವರ ಜಮೀನನ್ನೂ ಖಾಯಂ ಮಾಡುವುದರ ಜೊತೆಗೆ ಇನ್ನೂ ಕೂಡಾ ನಮ್ಮ ರಾಜ್ಯದಲ್ಲಿ ಅರಣ್ಯ ಇಲಾಖೆಯ ಜಮೀನನ್ನು ಒತ್ತುವರಿ ಮಾಡಿಕೊಂಡವರು, ಅದೇ ರೀತಿಯಲ್ಲಿ ಕಾನಾ ಹಾಗೂ ಬಾಣ ಎನ್ನತಕ್ಕಂಥ ಜಮೀನುಗಳನ್ನು ಕೂಡಾ ಒತ್ತುವರಿ ಮಾಡಿ ಕೊಂಡತಕ್ಕಂಥ ಹಲವಾರು ರೈತರುಗಳು ಇದ್ದಾರೆ. ಅವರ ಆಜ್ಞೆಯನ್ನು ಕೂಡಾ ಖಾಯಂ ಮಾಡಲಿಕ್ಕೆ ಸರ್ಕಾರ ಹೆಚ್ಚಿನ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ವಿನಂತಿಸಿಕೊಳ್ಳುತ್ತೇನೆ.

ಕಂದಾಯ ಇಲಾಖೆಯಲ್ಲಿ ಮುಖ್ಯವಾಗಿ ಇರುವಂಥ ಸಿಬ್ಬಂದಿ ಮಟ್ಟದಲ್ಲಿ ಮುಖ್ಯವಾಗಿ ಗ್ರಾಮ ಕರಣಿಕರ ಮಟ್ಟದಲ್ಲಿ ಹೇಳುವುದಾದರೆ ಬಹುಶಃ ನಮ್ಮ ರಾಜ್ಯದ ಗ್ರಾಮ ಕರಣಿಕರ ಒಂದು ನೇಮಕಾತಿ ಕಳೆದ ಹತ್ತು ವರ್ಷಗಳಿಂದ ಕುಂಠಿತಗೊಂಡು ಈಗ ಬಹುಶಃ ನಮ್ಮ ತಾಲ್ಲೂಕಿನಲ್ಲಿ ನೋಡಿದರೆ ಒಂದು ಮಂಡಲದಲ್ಲಿ ಗ್ರಾಮ ಕರಣಿಕರು ಇದ್ದು ಯಾವುದೇ ಗ್ರಾಮೀಣ ಮಟ್ಟದಲ್ಲಿ ಬಡ ಜನರ ಕೆಲಸವನ್ನು ಪೂರೈಸುವುದಕ್ಕೆ ಸಾಧ್ಯವಾಗದೇ ಇರುವಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹುಶಃ ಕಳೆದ ಏಳು ವರ್ಷಗಳಿಂದ ಹಿಂದೆ ಗ್ರಾಮಕರಣಿಕರ ಒಂದು ನೇಮಕಾತಿಗೆ ಅರ್ಜಿಗಳನ್ನು ಕರೆದು ಇನ್ನೂ ಕೂಡಾ ಯಾವ ಒಂದು ಕಾರ್ಯಕ್ರಮವನ್ನು ಪೂರೈಸುವುದಕ್ಕೆ ಸಾಧ್ಯವಾಗದೇ ಇದ್ದುದರಿಂದ ಗ್ರಾಮೀಣ ಮಟ್ಟದ ಒಂದು ಕೃಷಿಕ ರೈತರ ಸಮಸ್ಯೆಯನ್ನು ಪೂರೈಸುವುದಕ್ಕೆ ಖಂಡಿತವಾಗಿಯೂ ಅಸಾಧ್ಯವಾದಂಥ ಒಂದು ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಅದೇ ರೀತಿಯಲ್ಲಿ 1985ರಿಂದ ಕಂದಾಯ ಇಲಾಖೆಯ ಗ್ರಾಮ ಸಹಾಯಕರು ಗ್ರಾಮ ಲೆಕ್ಕಿಗರಿಗೆ ಸಹಾಯಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೋ ಅವರಿಗೆ 780 ರೂಪಾಯಿ ಮೂಲವೇತನವನ್ನು ನಿಗದಿಪಡಿಸಿ ಅವರನ್ನು ಡಿ. ಗ್ರೂಪ್ ನೌಕರರು ಎಂದು ಪರಿಗಣಿಸುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿತ್ತು. ಆದರೆ ಬಹುಶಃ ಇವತ್ತು ಯಾವುದೇ ಒಂದು ಸರ್ಕಾರದ ಮಟ್ಟದಲ್ಲಿ ಒಂದು ಜನಗಣತಿಯನ್ನು ತೆಗೆದುಕೊಳ್ಳಬೇಕು ಎಂದರೆ ಮುಖ್ಯವಾಗಿ ಮುತುವರ್ಜಿಯನ್ನು ವಹಿಸುವ ಇಲಾಖೆ ಎಂದರೆ ಕಂದಾಯ ಇಲಾಖೆ. ಕಂದಾಯ ಇಲಾಖೆಯಲ್ಲಿ ಇರುವಂಥ ನೌಕರರು ಈ ಒಂದು ಸಂದರ್ಭದಲ್ಲಿ ಬಹುಶಃ ಈಗ ಚುನಾವಣೆ ಬಂತು ಎಂದು ಹೇಳಿದರೆ ಅವರು ದಿನದ 24 ಗಂಟೆಗಳ ಕಾಲ ತಮ್ಮ ಸೇವೆಯನ್ನು ಮಾಡುವಂಥ ಒಂದು ಇಲಾಖೆಯಾಗಿರುತ್ತದೆ. ಇಂಥ ಸಂದರ್ಭದಲ್ಲಿ ಗ್ರಾಮಕರಣಿಕರಿಗೆ ಸಹಾಯಕರಾಗಿರುವಂಥ ಗ್ರಾಮ ಸಹಾಯಕರು ಎಂದು ಏನು ಇದ್ದಾರೆ, ಅವರಿಗೆ 300 ರೂಪಾಯಿ ವೇತನವನ್ನು ಸರ್ಕಾರ ಈ ಹಿಂದೆಯೇ ಕೊಡುತ್ತಿತ್ತು. ಆದರೂ ಕೂಡಾ ತಮ್ಮ ಸರ್ಕಾರ ಅದನ್ನು 500 ರೂಪಾಯಿಗಳಿಗೆ ಏರಿಸಿದೆ.

ಮುಖ್ಯವಾಗಿ ಹೇಳುವುದು ಇದ್ದರೆ ಈ 500 ರೂಪಾಯಿಯ ವೇತನ ಬಹುಶಃ ಗ್ರಾಮ ಸಹಾಯಕರಿಗೆ ಎಷ್ಟು ಮಾತ್ರಕ್ಕೂ ಸಾಲದಾಗಿದೆ. ಆದ್ದರಿಂದ ಇವರನ್ನೂ ಕೂಡಾ "ಡಿ" ಗ್ರೂಪ್ ನೌಕರರು ಎಂದು ಪರಿಗಣಿಸಿ 82ರಲ್ಲಿ ಹೊರಡಿಸಿದಂಥ ಒಂದು ಆಜ್ಞೆಯನ್ನು ಆರ್ಥಿಕ ಇಲಾಖೆಯು ಖಾಯಂಗೊಳಿಸಿ ಅವರ ಒಂದು ವೇತನವನ್ನು ಮೂಲವೇತನವನ್ನಾಗಿ ಪರಿಗಣಿಸಿ ಅವರಿಗೆ ಸರಿಯಾದ ವೇತನವನ್ನು ಕೊಡುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಬಹುಶಃ ಲೋಕೋಪಯೋಗಿ ಇಲಾಖೆಯನ್ನು ತೆಗೆದುಕೊಂಡರೆ 1983ನೇ ಇಸವಿಯಿಂದ ಸಾಧಾರಣ ಏಳು ವರ್ಷದವರೆಗೂ ಹಿಂದಿನ ಸರ್ಕಾರದವರು ಹಾಕಿಕೊಂಡಂಥ ಕಾರ್ಯಕ್ರಮಗಳ ಪೈಕಿ ಯಾವುದೇ ಕೆಲಸಕಾರ್ಯಗಳನ್ನು ಕೂಡಾ ಕೈಗೊಂಡಿಲ್ಲ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

1985ರಲ್ಲಿ ಮಂಜೂರಾದ ನನ್ನ ಕ್ಷೇತ್ರದ ಕಾಮಗಾರಿಗಳು ಯಾವುದು ಇನ್ನು ಪೂರೈಸಿಲ್ಲ. ಆದರೂ ಕೂಡ ಸರ್ಕಾರ ಅಧಿಕಾರಕ್ಕೆ ಬಂದು ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಂಡು ಗಡಿ ಪ್ರದೇಶದ ಅಭಿವೃದ್ಧಿ ಯೋಜನೆಯನ್ನು ಹಾಕಿಕೊಂಡು 25 ಲಕ್ಷ ರೂಪಾಯಿವರೆಗಿನ ಕಾಮಗಾರಿಗಳನ್ನು ಗಡಿ ಪ್ರದೇಶದ ತಾಲ್ಲೂಕುಗಳನ್ನು ವೀಕ್ಷಿಸಿದರೆ ಉತ್ತಮವಾದ ಸಾಧನೆಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ಮಾಡಿದ್ದೇವೆ. ಅದೇ ರೀತಿ ಇನ್ನೂ ಎರಡು ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ರೂಪಿಸಿಕೊಂಡಿದೆ.

ಮುಖ್ಯವಾಗಿ ಅಸಿಸ್ಟೆಂಟ್ ರೆಗ್ಯುಲೇಟಿಂಗ್ ಮಾರ್ಕೆಂಟಿಂಗ್ ಸೊಸೈಟಿ ಮತ್ತು ಜಿಲ್ಲಾ ಪ್ರದೇಶದಲ್ಲಿ ಬರುವಂತಹ ಅಪಗ್ರೆಡೇಷನ್ ರೋಡ್‌ಗಳನ್ನು ಅಭಿವೃದ್ಧಿ ಪಡಿಸಲಿಕ್ಕೆ ಜಿಲ್ಲಾ ಪರಿಷತ್ತಿನ ಅಸ್ಥಿತ್ವದಿಂದ ಬರುವಂತಹ ತೊಂದರೆಯಿಂದ ಲೋಕೋಪಯೋಗಿ ಇಲಾಖೆ ನೇರವಾಗಿ ಕೈಗೊಳ್ಳುವುದರ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಇದಕ್ಕೆ ಹೆಚ್ಚಿನ ಕಾರ್ಯಕ್ರಮವನ್ನು ಕೈಗೊಂಡಂತೆ ಈ ಕೆಲಸ ಕಾರ್ಯಗಳನ್ನು ಪೂರೈಸಬೇಕಾದರೆ ಹಣ ಬಿಡುಗಡೆ ಮಾಡಲಿಲ್ಲ. ಈ ಹಣವನ್ನು ಬಿಡುಗಡೆ ಮಾಡಿದರೆ ನಮ್ಮ ಕ್ಷೇತ್ರದ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಾಗುತ್ತದೆ. ಇವೊತ್ತು ಸಮಾಜ ಕಲ್ಯಾಣ ಇಲಾಖೆಯನ್ನು ತೆಗೆದುಕೊಂಡರೆ ಇದು ಆಮೆಯ ನಡುಗೆಯಲ್ಲಿ ಹೋಗುತ್ತಿರುವುದನ್ನು ನಾವು ಕಾಣಬಹುದು. ಎಷ್ಟೋ ವರ್ಷಗಳಿಂದ ಈ ಒಂದು ಇಲಾಖೆ ಒಂದು ಆಮೆಯ ನಡುಗೆಯಲ್ಲಿ ನಡೆದುಕೊಂಡು ಹೋಗುತ್ತಿದೆ. ಈ ಇಲಾಖೆಗೆ ಸರ್ಕಾರ ಒದಗಿಸಿದ ಹಣವನ್ನು ವೆಚ್ಚ ಮಾಡಲಿಕ್ಕೆ ಇಲಾಖೆಯ ಮುಖ್ಯಸ್ಥರು ಹಿಂಜರಿಯುತ್ತಿದ್ದಾರೆ. ಇದರಿಂದ 100ಕ್ಕೆ 70 ಭಾಗದಷ್ಟು ಕೆಲಸ ಕಾರ್ಯಗಳು ಸಮಾಜ ಕಲ್ಯಾಣ ಇಲಾಖೆಯಲ್ಲಿ ಆಗುತ್ತಿಲ್ಲ. ಈ ಇಲಾಖೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಿಟ್ಟ ಇಲಾಖೆಯಾಗಿದೆ. ಈ ಇಲಾಖೆಯಲ್ಲಿ ನಿಯೋಜಿಸಿದ ಹಣ ಇವತ್ತು ಖರ್ಚಾಗದೆ ಇರುವುದು ಅಥವಾ ತಾಲ್ಲೂಕು ಪಂಚಾಯತಿಯಲ್ಲಾಗಲಿ ಅಥವಾ ಜಿಲ್ಲಾ ಪರಿಷತ್ತಿನ ಕಛೇರಿಯಲ್ಲಿ ನೋಡಿದಾಗ ಆ ಹಣವನ್ನು ವೆಚ್ಚ ಮಾಡದೆ ಪುನಃ ಸರ್ಕಾರಕ್ಕೆ ವಾಪಸಿಕೊಟ್ಟು ಈ ಕಾಮಗಾರಿಗಳನ್ನು ಮಾಡಲು ಸಾಧ್ಯವಾಗದೇ ಇರುವಂತಹ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇನೆ. ಇದಕ್ಕೆ ಸರ್ಕಾರ ಬಿಗಿಯಾದ ಕ್ರಮಕೈಗೊಂಡರೆ ಖಂಡಿತವಾಗಿ ಪೂರೈಸಲು ಸಾಧ್ಯವಿದೆ.

ಸಮಾಜ ಕಲ್ಯಾಣ ಇಲಾಖೆಯಲ್ಲಿ ಇನ್ನಿತರ ವಿಭಾಗಗಳನ್ನು ಕಂಡಾಗ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಹಾಸ್ಟೆಲ್‌ಗಳ ಮೂಲಕ ಅಲ್ಲಿನ ಮಕ್ಕಳಿಗೆ ಕೊಡುವಂತಹ ಆಹಾರದ ಕೊರತೆ ತುಂಬಾ ಇದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಇವತ್ತು ಸಿಬ್ಬಂದಿಯನ್ನು ಸಹಾ ನೇಮಕ ಮಾಡುವುದಕ್ಕೆ ಆಗುತ್ತಿಲ್ಲ. ಈ ಇಲಾಖೆಯಲ್ಲಿ ಇಷ್ಟೊಂದು ಹಣ ಸೋರಿ ಹೋಗುತ್ತಿದ್ದರೂ ಅಥವಾ ಈ ಹಣವನ್ನೂ ಸರ್ಕಾರ ವಾಪಸ್ಸು ಪಡೆಯುತ್ತಿದ್ದರೂ ಸಿಬ್ಬಂದಿಯನ್ನು ನೇಮಕ ಕೂಡ ಮಾಡದೇ ನೇಮಕಾತಿಯಲ್ಲಿ ಹಿಂದೆ ಬಿದ್ದಿರುವುದನ್ನು ಸಹ ನಾವು ಕಾಣುತ್ತಿದ್ದೇವೆ.

ಎಷ್ಟೋ ವರ್ಷಗಳ ಹಿಂದೆ ಹಾಸ್ಟೆಲ್‌ಗಳಲ್ಲಿ ಕಲಿಯುವಂತಹ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ದಿನಕ್ಕೆ ನಿಗದಿಪಡಿಸಿದಂತಹ 1-50 ಪೈಸೆ ಊಟವನ್ನು ಕೊಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇವತ್ತು ಸಹ ಅದೇ ಕಾರ್ಯಕ್ರಮ ಇದೆ. ಇದರಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಹಾಸ್ಟೆಲ್‌ಗಳಲ್ಲಿ ಕಲಿಯುವಂತಹ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹೆಚ್ಚಿನ ವಿದ್ಯಾಭ್ಯಾಸ ಪಡೆಯಬೇಕೆಂಬ ಉತ್ಸಾಹ ಅವರಲ್ಲಿ ಬರುತ್ತಿಲ್ಲ. ದ್ವಾಪರಯುಗದಲ್ಲಿ ಹಾಕಿದಂತಹ ಲೆಕ್ಕಾಚಾರದ ಮೂಲಕ ಈಗಲೂ ಸಹ ಊಟವನ್ನು ಕೊಡುವಂತಹ ಪದ್ಧತಿಯನ್ನು ಕೈಬಿಟ್ಟು ಈ ಇಲಾಖೆಯಲ್ಲಿ ಬೇಕಾದಷ್ಟು ಹಣವಿರುವುದರಿಂದ ಅವರಿಗೆ ಸರಿಯಾಗಿ ಊಟ ಹಾಕುವಂತಹ ವ್ಯವಸ್ಥೆ ಮಾಡಿ, ಅವರಿಗೆ ಊಟಕ್ಕೆ ಎಷ್ಟು ಬೇಕು ಎಂದು ಗಮನಕ್ಕೆ ತೆಗೆದುಕೊಂಡು ಅಷ್ಟು ಊಟ ಕೊಟ್ಟಾಗ ಮಾತ್ರ ವಿದ್ಯಾರ್ಥಿ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆಯಲಿಕ್ಕೆ ಸಾಧ್ಯವಾಗುತ್ತದೆ. ಒಂದು ತೆಂಗಿನಕಾಯಿಗೆ 7 ರೂಪಾಯಿ ಬೆಲೆ ಇರುವುದರಿಂದ ಆ ಆಧಾರವನ್ನು ಲೆಕ್ಕ ಇಟ್ಟುಕೊಂಡು ಯಾವುದೇ ಊಟವನ್ನು ಹಾಕಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದನ್ನು ಸರಿಪಡಿಸುವುದಕ್ಕೆ ಸರ್ಕಾರ ಹೆಚ್ಚಿನ ಒತ್ತುಕೊಟ್ಟು ವಿದ್ಯಾರ್ಥಿಗಳಿಗೆ ಕೊಡುವಂತಹ ಊಟದ ಮೊತ್ತವನ್ನು ಜಾಸ್ತಿ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅದೇ ರೀತಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಲ್ಲಿ

ಕಾಯ್ದಿರಿಸಿದ ಸ್ಥಾನದಲ್ಲಿ ಮೀಸಲಾತಿಗೆ ಸರಿಯಾಗಿ ಉದ್ಯೋಗವನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಅದ್ದರಿಂದ ಉದ್ಯೋಗದಲ್ಲಿ ಕೂಡ ಕಾಯ್ದಿರಿಸಿದ ಸ್ಥಾನವನ್ನು ತುಂಬಲು ಕೇಂದ್ರ ಸರ್ಕಾರ ಸಹ 2-3 ವರ್ಷಗಳಿಂದ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಆದರೆ ಈ ನಮ್ಮ ಕರ್ನಾಟಕ ಸರ್ಕಾರ ಈ ಒಂದು ಪದ್ಧತಿಯನ್ನು ಇನ್ನೂ ಕೂಡ ಕೈಗೆತ್ತಿಕೊಂಡಿಲ್ಲ. ಇವತ್ತು ನಾವು ಇದರಿಂದಾಗಿ ಪರಿಶಿಷ್ಟ ಜಾತಿ ಅಥವಾ ಪಂಗಡದ ಜನರು ತೊಂದರೆಗೊಳಗಾಗಿರುವಂಥ ಸಮಸ್ಯೆಯನ್ನು ನಾವು ಕಾಣುತ್ತಿದ್ದೇವೆ. ಉದಾಹರಣೆಗೆ ಇವ್ಹೊತ್ತು ಎಷ್ಟೋ ಸಾವಿರ ಲೋಕೋಪಯೋಗಿ ಇಲಾಖೆಯಲ್ಲಿ ದುಡಿಯುವಂಥ ದಿನಗೂಲಿ ನೌಕರರನ್ನು ಖಾಯಂ ಮಾಡುವಂತಹ ಒಂದು ಪದ್ಧತಿಯನ್ನು ಶ್ರೇಷ್ಟ ನ್ಯಾಯಾಲಯ ತನ್ನ ಆದೇಶದ ಮೂಲಕ ಕೊಟ್ಟಿದೆ. ಆ ಮೂಲಕ ಇವ್ಹೊತ್ತು ಭರ್ತಿ ಮಾಡಿದರೆ ರೋಸ್ಟರ್ ಸಿಸ್ಟಮ್‌ನ್ನು ಯಾವಾಗ ಮಾಡುವುದಿಲ್ಲವೋ ಅಲ್ಲಿಯವರೆಗೆ ಮೈನ್‌ಟೈನ್ ಸಾಧಾರಣ ಇನ್ನೂ 25 ವರ್ಷಗಳ ಕಾಲ ಮುಂದಕ್ಕೆ ಹೋದರೂ ಕೂಡ ಈ ರೋಸ್ಟರ್ ಸಿಸ್ಟಮ್ ಅಥವಾ ರಿಸರ್ವೇಷನ್ ಮೂಲಕ ಅಲ್ಲಿ ಪರಿಶಿಷ್ಟಜಾತಿ ಮತ್ತು ಪಂಗಡದವರು ಈ ಒಂದು ಉದ್ಯೋಗಕ್ಕಾಗಿ ಮುಂದೆ ಬರಬೇಕಾದವರಿಗೆ ಸ್ಥಾನ ಸಿಕ್ಕುವಂಥ ಸಾಧ್ಯತೆ ಇರುವುದಿಲ್ಲ. ಇದನ್ನು ನೋಡಿ ತಾವು ರೋಸ್ಟರ್ ಸಿಸ್ಟಮ್ ಮೈನ್‌ಟೈನ್ ಮಾಡುವಂತಾದ್ದು ಆಗಬೇಕು. ದಿನಗೂಲಿ ನೌಕರರು ಏನಿದ್ದಾರೆ, ಅದರಲ್ಲಿಯೂ ಕೂಡ ತುಂಬಾ ಅನ್ಯಾಯವಾಗಿದೆ. ಏಕೆಂದರೆ, ದಿನಗೂಲಿ ನೌಕರರನ್ನು, ಸ್ಟೈಪಂಡರಿ ಪದವೀಧರರನ್ನು ಸೇವೆಗೆ ತೆಗೆದುಕೊಳ್ಳುವಾಗ ಅಧಿಕಾರ ಮಟ್ಟದಲ್ಲಿ, ಯಾರು ಅವರ ಸಂಬಂಧಿಕರು ಇದ್ದರು, ಇನ್ನಿತರೆ ಒತ್ತಡಕ್ಕೆ ಪ್ರಭಾವಕ್ಕೆ ಒಳಗಾಗಿ ಈ ಒಂದು ನೇಮಕಾತಿಯನ್ನು ಮಾಡಿದರು.

ಇವ್ಹೊತ್ತು ಪರಿಶಿಷ್ಟ ಜಾತಿ ಅಥವಾ ಪಂಗಡದವರು ಏನಿದ್ದಾರೆ, ಅವರ ಮೀಸಲಾತಿಯನ್ನು ಈ ಒಂದು ಡೈಲಿವೇಜಸ್‌ನಲ್ಲಿಯಾಗಲಿ, ಸ್ಟೈಪಂಡರಿ ಪದವೀಧರರಲ್ಲಿಯಾಗಲಿ, ಅಳವಡಿಸಿಕೊಂಡಿರುವುದಿಲ್ಲ. ಇದರಿಂದ ಈ ಜನರಿಗೆ ತುಂಬಾ ಅನ್ಯಾಯವಾಗಿದೆ. ಈ ಬಗ್ಗೆ ನಾವು ಕಳೆದ ಸದನದಲ್ಲಿ ಈ ಸಮಸ್ಯೆ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದೆವು. ಆಗ ಆಗಿನ ಮುಖ್ಯಮಂತ್ರಿಯವರು ಇದರ ಬಗ್ಗೆ ಮುಂದಕ್ಕೆ ತೀರ್ಮಾನ ಕೈಗೊಳ್ಳುವಂಥ ವ್ಯವಸ್ಥೆಯನ್ನು ಮಾಡಿದ್ದರು. ಪ್ರಶ್ನೆಯನ್ನು ಕೂಡ ಮುಂದಕ್ಕೆ ತಡೆಹಿಡಿಯಲಾಗಿತ್ತು. ಆದರೆ ಇಲಾಖೆ ಇದುವರೆಗೂ ಯಾವುದೇ ಒಂದು ಕಾರ್ಯಕ್ರಮವನ್ನು ಹಾಕಲಿಲ್ಲ. ಅದೇ ರೀತಿಯಲ್ಲಿ ಇನ್ನೊಂದು ವಿಷಯ ನಡೆದಿರುವುದನ್ನು ಹೇಳಬೇಕೆಂದರೆ, ಸಹಕಾರ ಸಂಘದಲ್ಲಿಕೂಡ 14(ಬಿ) ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ, ಉದ್ಯೋಗವನ್ನು ಶೇಕಡಾವಾರು ಪರಿಗಣನೆಯನ್ನು ಮಾಡಿಕೊಂಡು ಕೊಡಬೇಕೆಂದು ಹೇಳುವುದನ್ನು ಸರ್ಕಾರ ಆದೇಶ ಹೊರಡಿಸಿದರೂ ಕೂಡ ಯಾವುದೇ ಒಂದು ಸಹಕಾರ ಸಂಘಗಳಲ್ಲಿ ಇವ್ಹೊತ್ತು ಕ್ಯಾಮ್‌ಕೋ ನೋಡಿದರೆ ಆಗಲೀ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ನೋಡಿದರೆ ಆಗಲೀ ಟಿಎಪಿಸಿಎಂಎಸ್ ಮುಂತಾದ ಯಾವುದೇ ಗ್ರಾಮೀಣ ಪತ್ತಿನ ಬ್ಯಾಂಕಿನಲ್ಲಿ ನೋಡಿದರೂ ಕೂಡ ಯಾವುದೇ ಒಬ್ಬ ಪರಿಶಿಷ್ಟಜಾತಿ ಮತ್ತು ಪಂಗಡದವರು ಉದ್ಯೋಗಿಗಳು ಇಲ್ಲದಿರುವುದನ್ನು ನಾವು ಗಮನಿಸಬಹುದು. ಈ ಒಂದು ಆದೇಶ ಏನಿದೆ ಅದನ್ನು ಕಡ್ಡಾಯವಾಗಿ ಜಾರಿಗೊಳಿಸುವಂತೆ ಸರ್ಕಾರ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಆಚೆ ಇನ್ನು ಅದೇ ರೀತಿಯಲ್ಲಿ ಸಮಾಜ ಕಲ್ಯಾಣ ಬಗ್ಗೆ ಹೇಳಬೇಕೆಂದರೆ, ಈ ವರ್ಷ ಡಾ. ಬಿ.ಆರ್. ಅಂಬೇಡ್ಕರ್ ಅವರ ಶತಮಾನೋತ್ಸವ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ. ಇದಕ್ಕಾಗಿ ಈ ಒಂದು ಯೋಜನೆಯಲ್ಲಿ ಸರ್ಕಾರ ಎಷ್ಟೋ ಕೋಟಿ ರೂಪಾಯಿಗಳ ಹಣವನ್ನು ತೊಡಗಿಸಿಕೊಂಡಿದೆ. ಈ ಒಂದು ಹಣದಲ್ಲಿ

ಪರಿಶಿಷ್ಟಜಾತಿ ಮತ್ತು ಪಂಗಡದವರಿಗೆ ತಾಲ್ಲೂಕು ಮಟ್ಟದಲ್ಲಿ 100 ಮನೆಗಳನ್ನು ಕಟ್ಟುವಂಥ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದು ನಿಜವಾಗಿಯೂ ಸಂತೋಷದ ವಿಷಯ. ಅದರ ಜೊತೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಗ್ರಾಮೀಣ ಪ್ರದೇಶಗಳಲ್ಲಿ ವಸತಿ ಶಾಲೆಗಳನ್ನು ಮಾಡಿಕೊಡುವಂಥ ಕಾರ್ಯಕ್ರಮವನ್ನು ಈ ಹಿಂದೆ ಸರ್ಕಾರ ಹಾಕಿಕೊಂಡಿತ್ತು. ಈಗ ಕೇವಲ ತಾಲ್ಲೂಕಿನ ಒಂದು ಗಿರಿಜನ ವಸತಿ ಶಾಲೆಗಳು ಇವೆ. ಆದರೆ ಪರಿಶಿಷ್ಟ ಜನರಿಗೆ ಇಂಥ ವಸತಿ ಶಾಲೆಗಳು ಇರುವುದಿಲ್ಲ. ಈ ಒಂದು ಪರಿಶಿಷ್ಟ ಜನರಿಗೆ ವಸತಿ ಶಾಲೆಗಳನ್ನು ಕೂಡ ಪ್ರತಿಯೊಂದು ಮಂಡಲದಲ್ಲೂ ಕಾರ್ಯಕ್ರಮ ಹಾಕಿಕೊಂಡು ಮಂಡಲಿಗೆ ಒಂದು ವಸತಿ ಶಾಲೆಯನ್ನು ತೆಗೆಯುವಂತಹ ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅದರ ಜೊತೆಗೆ ಇನ್ನೊಂದು ವಿಷಯವನ್ನು ಹೇಳುವುದಾದರೆ, ವಿದ್ಯಾ ಕ್ಷೇತ್ರದಲ್ಲಿ ನಮ್ಮ ಸರ್ಕಾರ ಹೆಚ್ಚಿನ ಒಂದು ಸಾಧನೆಯನ್ನು ಕೈಗೆತ್ತಿಕೊಂಡಿದೆ.

ಮುಖ್ಯವಾಗಿ ಮಧ್ಯಾಹ್ನ ಊಟದ ವ್ಯವಸ್ಥೆಗೆ ಒಂದನೇ ತರಗತಿಯಿಂದ ಏಳನೇ ತರಗತಿಯವರೆಗೆ ಕಲಿಯುತ್ತಿರುವಂಥ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ, ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಕೈಗೊಂಡಿರುವ ವಿಷಯ ನಿಜಕ್ಕೂ ಸಂತೋಷದ ವಿಷಯ. ಇದರ ಜೊತೆಯಲ್ಲಿ ನಾವು ಈ ಹಿಂದೆ, ಸರ್ಕಾರದಿಂದ ನವೋದಯ ಶಾಲೆ ಬಗ್ಗೆ ಒಂದು ಪ್ರಸ್ತಾಪವನ್ನು ಕೇಳಿದ್ದೆವು. ಜಿಲ್ಲೆಗೊಂದು ನವೋದಯ ಶಾಲೆ ಪ್ರಾರಂಭ ಮಾಡುವಂಥ ಕಾರ್ಯಕ್ರಮ ಇತ್ತು. ಆ ಒಂದು ನವೋದಯ ಶಾಲೆ ಜಿಲ್ಲೆಗೊಂದು ಆರಂಭವಾಗಿದೆಯೋ ಇಲ್ಲವೋ ಎಂದು ಗೊತ್ತಿಲ್ಲ. ಬಹುಶಃ ಇವೊತ್ತು ಅದರ ಪ್ರಸ್ತಾಪ ಆ ನವೋದಯ ಶಾಲೆಯ ಭವಿಷ್ಯತ್ತ ಯಾವ ರೀತಿ ಇದೆ ಎಂದು ನಾವು ಕಾಣುತ್ತಿಲ್ಲ. ಆದ್ದರಿಂದ, ಈ ಒಂದು ನವೋದಯ ಶಾಲೆಯ ಕಾರ್ಯಕಲಾಪ ಯಾವರೀತಿ ಸಾಗುತ್ತಿದೆ, ಅಥವಾ ಆ ಒಂದು ನವೋದಯ ಕಾರ್ಯಕಲಾಪದಂತೆ ಒಳ್ಳೆಯ ಒಂದು ಪ್ರಯೋಜನ ಸಿಕ್ಕುವಂಥ ಕಾರ್ಯಕ್ರಮವನ್ನು ಸರ್ಕಾರ ತಂದು, ಇದರಲ್ಲಿ ಒಳ್ಳೆಯ ಅಭಿವೃದ್ಧಿಯನ್ನು ಕಾಣುವಂತೆ ಕ್ರಮ ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇದೇ ರೀತಿ ಸಹಕಾರ ಸಂಘಗಳ ವಿಚಾರದಲ್ಲಿ ಹೇಳುವುದಾದರೆ, ಹಿಂದಿನ ಸರ್ಕಾರ ಇದ್ದಾಗ ಶೇಕಡ 7ರ ಬಡ್ಡಿಯಲ್ಲಿ 5 ಸಾವಿರದಿಂದ 10 ಸಾವಿರದವರೆಗಿನ ಸಾಲವನ್ನು ಗ್ರಾಮೀಣ ಪತ್ತಿನ ಬ್ಯಾಂಕ್‌ಗಳಲ್ಲಿ ನೀಡಲಾಗುತ್ತಿತ್ತು. ಹಿಂದಿನ ಸರ್ಕಾರವೇ ಈ ಬಡ್ಡಿ ದರವನ್ನು 5 ಸಾವಿರದವರೆಗೆ ಶೇಕಡ 7 ರೂ. ಬಡ್ಡಿ ಮತ್ತು 5 ಸಾವಿರದಿಂದ 10 ಸಾವಿರದವರೆಗೆ ಶೇಕಡ 7.50 ರೂ. ಬಡ್ಡಿ ಮತ್ತು 10 ಸಾವಿರಕ್ಕಿಂತ ಹೆಚ್ಚಿನ ಮೊತ್ತದ ಸಾಲವನ್ನು ಪಡೆದುಕೊಂಡವರಿಗೆ ಶೇಕಡ 14 ರೂ. ಬಡ್ಡಿ ಎಂದು ಮಾಡಿತ್ತು. ಸಹಕಾರ ಸಂಘಗಳಲ್ಲಿ ಸಾಲವನ್ನು ತೆಗೆದುಕೊಳ್ಳತಕ್ಕ ರೈತನಿಗೆ ಬಹಳ ಅನ್ಯಾಯವಾಗಿದೆ ಎಂಬುದನ್ನು ತಿಳಿದು ಈ ಬಗ್ಗೆ ನಮ್ಮ ಸರ್ಕಾರ ಬಡ್ಡಿ ದರವನ್ನು ಯಾವುದೇ ಸಾಲದ ಮೊತ್ತವಿರಲಿ ಶೇಕಡ 7 ರೂ.ನಂತೆ ಹಾಕುವ ವಿಚಾರವನ್ನು ಪ್ರಸ್ತಾಪ ಮಾಡಿದೆ. ಇದನ್ನು ಸ್ವಾಗತಿಸುತ್ತಾ ಶೇಕಡ 7 ರೂ. ಬಡ್ಡಿಯ ಮೇರೆಗೆ ಸಾಲ ನಮ್ಮ ಗ್ರಾಮೀಣ ಜನರಿಗೆ ಸಿಕ್ಕುವಂತೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಇದೇ ರೀತಿ ರೈತರ ಸಾಲದ ಬಗ್ಗೆ ಅಥವಾ ಈ ಹಿಂದೆ ಸಾಲವನ್ನು ತೆಗೆದುಕೊಂಡಿರತಕ್ಕ ರೈತರು ಬಡ್ಡಿಯನ್ನು ಕಟ್ಟುವುದಕ್ಕೆ ಸಾಧ್ಯವಾಗದೆ ಸುಸ್ತಿ ಬಡ್ಡಿಯನ್ನು ಕೊಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಈ ರೀತಿ ಸುಸ್ತಿ ಬಡ್ಡಿಯನ್ನು ಪಾವತಿ ಮಾಡಲು ತುಂಬಾ ಕಷ್ಟವಾಗಿರುವುದರಿಂದ ಇಂಥ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಇದೇ ರೀತಿ ಸಾರಿಗೆ ಇಲಾಖೆಯ ವಿಚಾರದಲ್ಲಿ ಹೇಳುವುದಾದರೆ, ಇವತ್ತು ಗ್ರಾಮೀಣ ಪ್ರದೇಶಗಳಿಗೆ ಕೂಡ ಹೆಚ್ಚಿನ ಬಸ್ಸುಗಳ ಸೌಕರ್ಯವನ್ನು ಮಾಡಿಕೊಡುತ್ತೇವೆಂದು ಹೇಳಿದ್ದರೂ ಇವತ್ತು ಸಾರಿಗೆ ಇಲಾಖೆಯ ಮೂಲಕ ಓಡುತ್ತಿರುವ ಬಸ್ಸುಗಳು ಬಹಳಷ್ಟು ಹಳೆಯದಾಗಿದ್ದು ಈ ಬಸ್ಸುಗಳಲ್ಲಿ ಪ್ರಯಾಣಿಕರು ಸಂಚಾರ ಮಾಡುವುದೇ ಬಹಳ ಕಷ್ಟವಾಗ್ತಿದೆ. ಇದರ ಜೊತೆಗೆ ಪ್ರತಿಯೊಂದು ತಾಲ್ಲೂಕು ಕೇಂದ್ರಕ್ಕೂ ಒಂದೊಂದು ಡಿಲಕ್ಸ್ ಬಸ್ಸನ್ನು ಓಡಿಸತಕ್ಕ ಕಾರ್ಯಕ್ರಮವನ್ನು ಸರ್ಕಾರದವರು ಹಮ್ಮಿಕೊಂಡಿದ್ದರೂ ಕೂಡ ಕೆಲವು ಸಂದರ್ಭಗಳಲ್ಲಿ ಇಲಾಖೆಯವರ ನಿರ್ಲಕ್ಷ್ಯತನದಿಂದಾಗಿ, ಅವರು ಬಸ್ಸುಗಳನ್ನು ಕೊಡುವುದರಲ್ಲಿ ಅಡ್ಡಿ ಆತಂಕಪಡಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ಸಾರಿಗೆ ಬಸ್ಸುಗಳನ್ನು ಸರಿಯಾದ ರೀತಿಯಲ್ಲಿ ಪ್ರತಿನಿತ್ಯ ತೊಳೆಯತಕ್ಕ ಕೆಲಸವನ್ನು ಕೂಡ ಮಾಡುತ್ತಿಲ್ಲ. ಬಸ್ಸುಗಳನ್ನು ಸ್ವಚ್ಛಗೊಳಿಸುವ ಕಾರ್ಯಕ್ರಮಗಳನ್ನು ಹಾಕಿಕೊಂಡು ಡಿಪೋಗಳಲ್ಲಿ ಬಿಲ್ಲುಗಳನ್ನು ಕೊಟ್ಟರೂ ಕೂಡ ಬಸ್ಸುಗಳನ್ನು ತೊಳೆಯತಕ್ಕ ಕೆಲಸ ಮಾಡುತ್ತಿಲ್ಲ. ಈ. ವ್ಯವಸ್ಥೆ ಸರಿಯಾಗಿ ಆಗುವಂತೆ ಇಲಾಖೆಯವರಿಗೆ ಆದೇಶವನ್ನು ಕೊಟ್ಟರೆ ಇದು ಯಶಸ್ವಿಯಾಗುವುದಕ್ಕೆ ಸಾಧ್ಯವೆಂದು ಹೇಳಬಯಸುತ್ತೇನೆ.

ಇನ್ನು ಅರಣ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ಅರಣ್ಯಗಳಲ್ಲಿ ಇರತಕ್ಕ ಕಾಡಾನೆಗಳ ಹಾವಳಿ ಅತಿ ಭಯಂಕರವಾಗಿದ್ದು ಈ ಹಾವಳಿಯನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಳ್ಳುವಂತೆ. ನಾವು ಒತ್ತಾಯವನ್ನು ಮಾಡುತ್ತಲೇ ಬಂದಿದ್ದೇವೆ. ಆದರೂ ಗುಡ್ಡಗಾಡು ಪ್ರದೇಶಗಳಲ್ಲಿ, ಗ್ರಾಮಾಂತರ ಪ್ರದೇಶದಲ್ಲಿ ಇನ್ನೂ ಕೂಡ ಈ ಕಾಡಾನೆಗಳ ಹಾವಳಿ, ಇವುಗಳ ಕೀಟಲೆಯನ್ನು ನಾವು ಕಾಣುತ್ತಿದ್ದೇವೆ. ಸರ್ಕಾರಕ್ಕೆ ಅರಣ್ಯ ಇಲಾಖೆಯಿಂದ ಬಹಳಷ್ಟು ಆದಾಯ ಬರುತ್ತಿದೆ. ನಾವು ಈ ಇಲಾಖೆಯವರನ್ನು ಕೇಳಿಕೊಂಡಾಗ ಈ ಕಾಡಾನೆಗಳ ಹಾವಳಿಯನ್ನು ತಪ್ಪಿಸುವುದಕ್ಕೆ ಒಂದು ಬಲವಾದ ದೊಡ್ಡ ತಡೆಗೋಡೆಯನ್ನು ನಿರ್ಮಾಣ ಮಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆಂದು ತಿಳಿದುಬಂತು. ಈ ತಡೆಗೋಡೆಯನ್ನು ನಿರ್ಮಾಣ ಮಾಡಬೇಕೆಂಬ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದರೂ ಕೂಡ ಹಣದ ಕೊರತೆ ಇರುವುದರಿಂದ ಈಗ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕ ಮಾತು ಕೇಳಿಬರುತ್ತಿದೆ. ಆದರೆ ನಿಜವಾಗಿ ಅರಣ್ಯ ಇಲಾಖೆಯಲ್ಲಿ ಬಹಳಷ್ಟು ಆದಾಯ ಇದೆ. ಆನೆಗಳು ಬೆಳೆಗಳನ್ನು ಹಾನಿಮಾಡಿದ ಸಂದರ್ಭದಲ್ಲಿ, ರೈತರನ್ನು ಸಾಯಿಸಿದ ಸಂದರ್ಭದಲ್ಲಿ ಸರ್ಕಾರದಿಂದ ಸಿಕ್ಕತಕ್ಕ ಪರಿಹಾರ ಸರಿಯಾಗಿ ಸಿಕ್ಕದೇ ಪರಿಸ್ಥಿತಿ ಇನ್ನಷ್ಟು ಉಲ್ಬಣವಾಗುತ್ತಿದೆ. ಆದುದರಿಂದ ಇದಕ್ಕೆ ಅವಶ್ಯಕವಾದ ಕಾರ್ಯಕ್ರಮವನ್ನು ಪ್ರಾರಂಭದಲ್ಲೇ ಹಾಕಿಕೊಂಡರೆ ಮಾತ್ರ ಇದು ಸಾಧ್ಯವಾಗುತ್ತದೆ. ಈ ಕಾಡಾನೆಗಳಿಂದ ಆಗಬಹುದಾದ ತೊಂದರೆಯನ್ನು ತಪ್ಪಿಸುವುದಕ್ಕೆ ಆ ಅರಣ್ಯ ಪ್ರದೇಶದ ಗಡಿ ಭಾಗಗಳಲ್ಲಿ ತಡೆಗೋಡೆಗಳನ್ನು ಕಡ್ಡಾಯವಾಗಿ ನಿರ್ಮಾಣ ಮಾಡಿದರೆ ಮಾತ್ರ ರೈತನಿಗೆ ಅನುಕೂಲವಾಗುತ್ತದೆ ಮತ್ತು ಬೆಳೆಗಳಿಗೆ ರಕ್ಷಣೆ ಸಿಕ್ಕುತ್ತದೆ. ಹಾಗೂ ಆನೆಗಳಿಂದಾಗತಕ್ಕ ನಷ್ಟ ತಪ್ಪುತ್ತದೆ. ಅಷ್ಟೇ ಅಲ್ಲ ರೈತ ಆನೆಗಳ ತುಳಿತಕ್ಕೆ ಸಿಕ್ಕಿ ಮರಣ ಹೊಂದುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆಯಲ್ಲದೆ ಸರ್ಕಾರದವರು ರೈತರಿಗೆ ಕೊಡಬೇಕಾದ ಪರಿಹಾರ ಕೂಡ ತಪ್ಪುತ್ತದೆ. ಆದುದರಿಂದ ಗಡಿ ಪ್ರದೇಶದಲ್ಲಿ ಟ್ರೆಂಚ್‌ನ ನಿರ್ಮಾಣ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಸೂಚಿಸಬಯಸುತ್ತೇನೆ.

ಇವತ್ತಿನವರೆಗೆ ನಮ್ಮ ಪ್ರಕಾರ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದನಂತರ ರೈತರಿಗೆ ಹೆಚ್ಚಿನ ಒಂದು ಕೃಷಿಕರಿಗೆ ಪ್ರಯೋಜನ ಕೊಡುವಂಥ ಕಾರ್ಯಕ್ರಮವನ್ನು ಇವತ್ತು ಹಮ್ಮಿಕೊಂಡಿದೆ. ಅದರ ಜೊತೆಯಲ್ಲಿ ಹಿಂದಿನಿಂದ ಬಂದಿರತಕ್ಕಂಥ ಭಾಗ್ಯಜ್ಯೋತಿ ಅಂತಹ ಕೆಲವು ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಂಡಿದೆ. ಆದರೆ ಇವತ್ತು ಪ್ರತಿ ಗ್ರಾಮಗಳಲ್ಲಿ ಬಡವರಿಗೆ ಒಂದು ಬಲ್ಬನ್ನು ಕೊಟ್ಟು ಬೆಳಕನ್ನು ಕೊಡುವಂಥ ಒಂದು

ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರೂ ಕೂಡ ಇದರಲ್ಲಿ ಕೆಲವೊಂದು ಲೋಪದೋಷಗಳಿವೆ. ಬಹುಶಃ ಹಿಂದಿನ ಸರ್ಕಾರದ ಆದೇಶದ ಪ್ರಕಾರ ಭಾಗ್ಯಜ್ಯೋತಿ ಕಾರ್ಯಕ್ರಮವನ್ನು ಒಂದು ಹಳ್ಳಿಯಲ್ಲಿ 20 ಮನೆಗಳಿಗೆ ಮಾತ್ರ ಕೊಟ್ಟರೆ, ಆ 20 ಮನೆಗಳ ನಂತರ ಆ ಗ್ರಾಮಕ್ಕೆ ಭಾಗ್ಯಜ್ಯೋತಿ ಕಾರ್ಯಕ್ರಮವನ್ನು ಕೊಡಲು ಸಾಧ್ಯವಿಲ್ಲವೆನ್ನುವುದು ಸರ್ಕಾರದ ನಿಯಮ ಕೂಡ ಇದೆ. ಬಹುಶಃ ಇದರಿಂದ ಗ್ರಾಮೀಣ ಮಟ್ಟದಲ್ಲಿ ಇರುವಂಥ ಬಡ ಜನರಿಗೆ ಈ ಒಂದು ಬಲ್ಬಿನ ಬೆಳಕನ್ನೂ ಪಡೆಯಲಿಕ್ಕೆ ತುಂಬ ಕಷ್ಟವಾಗುತ್ತಿದೆ. ತಾಲ್ಲೂಕು ಪಂಚಾಯಿತಿ ಸಂಸ್ಥೆಗಳಲ್ಲಿ ಗ್ರಾಮಮಟ್ಟದಲ್ಲಿ ಈ ಭಾಗ್ಯ ಜ್ಯೋತಿ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಬೇಕೆಂದು ಹೇಳಿದಾಗ ಇಲಾಖೆಯ ಅಧಿಕಾರಿಗಳಿಂದ ಬರುವಂಥ ಉತ್ತರ ಒಂದು ಗ್ರಾಮಕ್ಕೆ 20 ಭಾಗ್ಯ ಜ್ಯೋತಿ ಬೆಳಕನ್ನು ಕೊಟ್ಟರೆ, ಮುಂದೆ ಆ ಗ್ರಾಮದಲ್ಲಿ ಆ ಕಾರ್ಯಕ್ರಮವನ್ನು ಹಾಕಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವ ಪ್ರಸ್ತಾಪನೆ ಬರುತ್ತದೆ. ಆದ್ದರಿಂದ ಇದರ ಒಂದು ನಿಯಮಾವಳಿಯನ್ನು ಸರ್ಕಾರದವರು ಸಡಿಲಿಸಬೇಕೆಂದು ನಾನು ಸರ್ಕಾರವನ್ನು ನಿಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಕಂದಾಯ ಇಲಾಖೆಯ ಬಗ್ಗೆ ಹೇಳುವುದಾದರೆ ಬಹುಶಃ ಪ್ರಕೃತಿ ವಿಕೋಪಕ್ಕೆ ತುತ್ತಾದ ಜನರಿಗೆ ಪರಿಹಾರವನ್ನು ಒದಗಿಸುವ ಕಾರ್ಯಕ್ರಮದಲ್ಲಿ ಈ ಹಿಂದೆ ಯಾವುದೇ ಸರ್ಕಾರ ಪ್ರಕೃತಿ ಕೋಪದಿಂದ ಕೃಷಿಕರಿಗೆ ಆದಂಥ ಹಾನಿಗೆ ಪರಿಹಾರ ನೀಡುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಲ್ಲ. ಈ ಬಗ್ಗೆ ಒಂದು ನಿಯಮ ಇಲ್ಲದಿರುವುದರಿಂದ ಇವತ್ತು ನಮ್ಮಲ್ಲಿ ಕೋಟಿಗಟ್ಟಲೆ ನಷ್ಟವಾಗಿರುವ ಕೃಷಿಕರಿದ್ದಾರೆ. ಇಂತಹವರಿಗೆ ಯಾವುದೇ ಒಂದು ಪರಿಹಾರವನ್ನು ಕೊಡಲಿಕ್ಕೆ ಸಾಧ್ಯವಾಗಿಲ್ಲ. ಈ ಪರಿಸ್ಥಿತಿ ಬಂದಿದೆ. ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಬಹುಶಃ ಒಬ್ಬ ರೈತರಿಗೆ ಸಾಧಾರಣವಾಗಿ ಮೂರು ಲಕ್ಷ ರೂಪಾಯಿಗಳವರೆಗೆ ನಷ್ಟವಾಗಿತ್ತು. ಕಳೆದ 1987ನೇ ಇಸವಿಯಲ್ಲಿ ವಿಪರೀತ ಮಳೆ ಮತ್ತು ಬಿರುಗಾಳಿ ಬಂದುದರಿಂದ ಅವರ ಅಡಕೆ ತೋಟ ಮತ್ತು ತೆಂಗಿನ ತೋಟ ಸಂಪೂರ್ಣವಾಗಿ ನಾಶವಾಗಿ ಹೋಯಿತು. ಅವರು ಮೂರು ಲಕ್ಷದ ನಷ್ಟಕ್ಕೆ ಸರ್ಕಾರದಿಂದ ಒಂದು ಪೈಸೆ ಪರಿಹಾರ ಕೊಡಲಿಕ್ಕೆ ಕಾನೂನಿನಲ್ಲಿ ಅವಕಾಶ ಇರಲಿಲ್ಲ. ವಿಷಯ ಈ ರೀತಿ ಇರುವುದರಿಂದ ಬಹುಶಃ ಆ ರೈತ ತುಂಬ ತೊಂದರೆಗೆ ಒಳಗಾಗಿ 1987ನೇ ಇಸವಿಯಿಂದ ಇಲ್ಲಿಯವರೆಗೆ ಇಲಾಖೆಯಿಂದ ಇಲಾಖೆಗೆ ಅಲೆದಾಡುತ್ತಿರುವುದನ್ನು ನಾವು ಕಾಣಬಹುದು. ಬಹುಶಃ ಇದರಲ್ಲಿ ಮುಖ್ಯವಾದ ತೊಂದರೆ ಏನೆಂದರೆ ಪ್ರಕೃತಿ ವಿಕೋಪದಿಂದ ನಮ್ಮ ಗುಡ್ಡಗಾಡು ಪ್ರದೇಶಗಳಲ್ಲಿ ಮುಖ್ಯವಾಗಿ ಪ್ರತಿಯೊಬ್ಬ ಕೃಷಿ ಬೆಳಿಗಾರರಿಗೂ ಬತ್ತದ ಕೃಷಿ ಮಾಡುವಂಥ ಅವನಿಗೆ ಗದ್ದೆಗಳಲ್ಲಿ ಅಲ್ಲಲ್ಲಿ ಆಗಿರುವ ಗುಣಿಗಳು ಇರುತ್ತದೆ. ಆ ಗುಣಿಗಳು ಮಳೆಯ ನೀರಿನಿಂದ ಅಥವಾ ಪ್ರವಾಹಕ್ಕೆ ಸಿಕ್ಕಿ ಹಾಳಾಗಿ ಹೋದಾಗ ಅಂತಹ ರೈತರಿಗೆ ಪರಿಹಾರವನ್ನು ಕೊಡುವಂಥ ಕಾರ್ಯಕ್ರಮವಿರುವುದಿಲ್ಲ. ಅದೇ ರೀತಿಯಲ್ಲಿ ಇವತ್ತು ಇನ್ನೊಂದು ವಿಷಯವನ್ನು ಹೇಳುವುದಿದ್ದರೆ ಬಹುಶಃ ಕೋಮುಗಲಭೆ ಮುಂತಾದ ಕಾರ್ಯಕ್ರಮಗಳಲ್ಲಿ ಸರ್ಕಾರ ಪರಿಹಾರವನ್ನು ಕೊಡುವಂಥ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಆದರೂ ಕೂಡ ಈ ಹಿಂದಿನ ಸರ್ಕಾರ ಕೇವಲ ಕಡಿಮೆ ಪರಿಹಾರವನ್ನು ಕೊಡುವಂಥ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿತ್ತು. ನಮ್ಮ ಸರ್ಕಾರ ಈ ಒಂದು ಕಾರ್ಯಕ್ರಮದಲ್ಲಿ ಕೋಮುಗಲಭೆಯಲ್ಲಿ ನೊಂದವರಿಗೆ ತುರ್ತು ಪರಿಹಾರವನ್ನು ಕೊಡುವಂಥ ಒಂದು ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಸಾಧಾರಣವಾಗಿ 20 ಸಾವಿರ ರೂಪಾಯಿಗಳವರೆಗೆ ಪರಿಹಾರವನ್ನು ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಹಾಗೂ ವಿಭಾಗಾಧಿಕಾರಿಗಳ ಮಟ್ಟದಲ್ಲಿ ಕೊಡುವಂಥ ಒಂದು ಕಾರ್ಯಕ್ರಮವನ್ನು ನಮ್ಮ ಸರ್ಕಾರ ಬಂದನಂತರ ಹಮ್ಮಿಕೊಂಡಿದೆ. ಅದೇ ರೀತಿಯಲ್ಲಿ ನಮ್ಮ ಸುಳ್ಯ ತಾಲ್ಲೂಕಿನಲ್ಲಿ ನಡೆದಂಥ ಕೋಮುಗಲಭೆಯ ಸಂದರ್ಭದಲ್ಲಿ ಸುಮಾರು 200 ಮನೆಗಳು

ನಷ್ಟಕ್ಕೆ ಒಳಪಟ್ಟವು. 200 ಮನೆಗಳಿಗೆ ಕಿಚ್ಚಿಟ್ಟು ನಷ್ಟವಾದಾಗ ತುರ್ತು ಪರಿಹಾರವಾಗಿ 10 ಸಾವಿರ ರೂಪಾಯಿಗಳವರೆಗೆ ಜಿಲ್ಲಾಧಿಕಾರಿಗಳು ಹಾಗೂ 20 ಸಾವಿರ ರೂಪಾಯಿಗಳವರೆಗಿನ ಪರಿಹಾರವನ್ನು ವಿಭಾಗಾಧಿಕಾರಿಗಳು ವಿಭಾಗ ಮಟ್ಟದಲ್ಲಿ ಜೊತೆಯಲ್ಲಿ ನೀಡಿರುವಂಥ ಪ್ರಕರಣಗಳು ಇವೆ. ಆದರೆ ಇವತ್ತು ಸಾಧಾರಣವಾಗಿ 7 ಲಕ್ಷ ಅಥವಾ 10 ಲಕ್ಷ ರೂಪಾಯಿಗಳಷ್ಟು ಹಾನಿಗೊಂಡಂಥ ಒಬ್ಬ ವ್ಯಕ್ತಿಗೆ ಪರಿಹಾರ ಸಿಗುವುದರಲ್ಲಿ ಸ್ವಲ್ಪ ಕಷ್ಟವಾಗಿದೆ.

ಆದ್ದರಿಂದ ಈ ಹೆಚ್ಚಿನ ಪರಿಹಾರವನ್ನು ಸರ್ಕಾರದವರು ಈಗಿನ ನಿಯಮಾವಳಿಯನ್ನು ಸಡಲಿಸಿ ಕೊಡುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳುವುದರ ಜೊತೆಗೆ ಅವನಿಗೆ ಬಡ್ಡಿರಹಿತ ಸಾಲವನ್ನು ಕೊಡುವಂಥ ವ್ಯವಸ್ಥೆಯಾಗಬೇಕು. ಸರ್ಕಾರ ಇವತ್ತಿನದಿವಸ ಅಂದರೆ 50 ಸಾವಿರ ರೂಪಾಯಿಗಳವರೆಗೆ ಅವನಿಗೆ ಎಷ್ಟೇ ನಷ್ಟವಾದರೂ ಕೂಡ ಅವನ ನಷ್ಟದ ಶೇಕಡಾ 30ರಷ್ಟು ಅಥವಾ 50 ಸಾವಿರ ರೂಪಾಯಿಗಳವರೆಗೆ ಮಾತ್ರ ಸಾಲ ಕೊಡುವಂಥ ಕಾರ್ಯಕ್ರಮವಿದೆ. ಬಹುಶಃ 7 ಲಕ್ಷ ರೂಪಾಯಿಗಳವರೆಗೆ ನಷ್ಟವಾಗಿರತಕ್ಕಂಥ ವ್ಯಕ್ತಿಗೆ ಪರಿಹಾರವನ್ನು ಕೊಡಲಿಕ್ಕೆ ಖಂಡಿತ ಕಷ್ಟಸಾಧ್ಯವಾಗಿದೆ. ಅವನು ಈಗಿನ ತೊಂದರೆಯಿಂದ ಪಾರಾಗಿ ಪುನಃ ಬೆಳಕಿಗೆ ಬರಬೇಕಾದರೆ ಹತ್ತು ವರ್ಷಗಳಾದರೂ ಬೇಕಾಗುತ್ತದೆ. ಆದ್ದರಿಂದ ಅವನಿಗೆ ಹೆಚ್ಚಿನ ಬಡ್ಡಿ ರಹಿತ ಸಾಲವನ್ನು ಕೊಡುವಂಥ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡು, ಸುಳ್ಯಾದ ಗಲಭೆಯಲ್ಲಿ ನೊಂದಂಥವರಿಗೆ ಹೆಚ್ಚಿನ ಪರಿಹಾರವನ್ನು ಮತ್ತು ಈಗಿನ ನಿಯಮಾವಳಿಯನ್ನು ಸಡಿಲಿಸಿ ಬಡ್ಡಿ ಸಾಲವನ್ನು ಕೊಡುವಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ, ಇಷ್ಟು ಮಾತನಾಡಲು ಈ ಸಂದರ್ಭದಲ್ಲಿ ಅವಕಾಶವನ್ನು ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು : ಪ್ರೊ. ನಂಜುಂಡಸ್ವಾಮಿಯವರು, ಈ ಸಭೆ ಒಮ್ಮತದಿಂದ ಒಪ್ಪಿದಂತಹ ಒಂದು ಬಿಲ್ಲಿನ ವಿಚಾರವಾಗಿ ಸದಸ್ಯರಾದ ಶ್ರೀ ಬಿ.ಐ. ಪಾಟೀಲರು ಮಾಡಿದಂತಹ ಸ್ಟೇಟ್‌ಮೆಂಟ್‌ನ್ನು ಪೂರ್ಣವಾಗಿ ಎಕ್ಸ್‌ಪಂಜ್ ಮಾಡಬೇಕೆಂಬ ಮಾತನ್ನು ಪ್ರಸ್ತಾಪ ಮಾಡಿ ಅದರ ಬಗ್ಗೆ ರೂಲಿಂಗ್ ಕೊಡಬೇಕೆಂದು ಹೇಳಿದ್ದಾರೆ. ಸಂಬಂಧಪಟ್ಟ ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗಿ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ತಮ್ಮ ಸ್ಟೇಟ್‌ಮೆಂಟ್‌ನ್ನು ಮಾಡಿರುವುದರಿಂದ ಅದನ್ನು ಎಕ್ಸಪಂಜ್ ಮಾಡುವುದು ಸರಿಯಲ್ಲವೆಂದು ನಾನು ಭಾವಿಸುತ್ತೇನೆ. ಈಗ ಸಭೆಯನ್ನು ಮುಂದುವರೆಸಿ ನಾಳೆ ಬೆಳಿಗ್ಗೆ 11ಕ್ಕೆ ಮತ್ತೆ ಸಭೆ ಸೇರುವುದು.

(ಸದನವು ಸಂಜೆ 6 ಗಂಟೆ 2 ನಿಮಿಷಕ್ಕೆ ಮುಕ್ತಾಯವಾಗಿ ಪುನಃ. 19ನೇ ಮಾರ್ಚ್ 1991ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)